

ದಕ್ಷಿಣ ಕರ್ನಾಟಕದ ಜನಪದ
ಕಲೆಗಳು

ಡಾ॥ ಚಕ್ಕೆರೆ ಶಿವಶಂಕರ್



ಜಾನಪದ ಪುಸ್ತಕ ಮಾಲೆ - ೬

ದಕ್ಷಿಣ ಕರ್ನಾಟಕದ ಜನಪದ ಕಲೆಗಳು

ಡಾ॥ ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

DAKSHINA KARNATAKADA JANAPADA KALEGALU-By **Dr. Chakkere Shivashankar**, Pulished by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054, Phone : 080-23605033. Janapada Loka : 7201143 / 727155

ಪ್ರಥಮ ಮುದ್ರಣ : ೨೦೦೮

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿಗಳು)

ಮುದ್ರಕರು :

ಚಂದನ ಪ್ರಿಂಟರ್ಸ್

ನಂ. ೫೭, ವಿನಾಯಕ ಕಾಂಪ್ಲೆಕ್ಸ್

೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜಾನಪದ ಜನಪ್ರಿಯ ಪುಸ್ತಕ ಮಾಲೆಯುನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಡಾ. ಚಕ್ಕೆರೆ ಶಿವಶಂಕರ್ ಅವರು **'ದಕ್ಷಿಣ ಕರ್ನಾಟಕದ ಜನಪದ ಕಲೆಗಳು'** ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಲೇಖಕರ ಮಾತು

ಜನರಿಂದ, ಜನರಿಗಾಗಿ, ಜನರಿಗೋಸ್ಕರ ಹುಟ್ಟಿಕೊಂಡ ಜನಪದ ಕಲೆಗಳು ಜನಪದದ ಕಲಾತ್ಮಕ ಅಭಿವ್ಯಕ್ತಿ. ವರ್ಣರಂಜಿತ ವೇಷಭೂಷಣ, ಸುಮಧುರ ವಾದ್ಯಮೇಳ, ಸಂಭಾಷಣೆ, ಹಾಡುಗಾರಿಕೆ, ಕುಣಿತ, ಅಭಿನಯ ಮೊದಲಾದ ಅಂಶಗಳನ್ನು ತನ್ನಲ್ಲಿ ಅಂತರ್ಗತಿಸಿಕೊಂಡಿರುವ ಜನಪದ ಕಲೆಗಳು ಸಮುದಾಯದ ಬದುಕಿನ ಮೌಲ್ಯಗಳನ್ನು ಒಳಗೊಂಡಿರುವ ಸಂಸ್ಕೃತಿಯ ಕುರುಹುಗಳು ಎಂದರೆ ತಪ್ಪಲ್ಲ.

ಕರ್ನಾಟಕದಲ್ಲಿ ಸುಮಾರು ೨೦೦ ಕ್ಕೂ ಹೆಚ್ಚು ಜನಪದ ಕಲೆಗಳು ಪ್ರಚಲಿತದಲ್ಲಿವೆ. ಇವುಗಳಲ್ಲಿ ಕೆಲವು ಪ್ರಕಾರಗಳಂತೂ ಸಾರ್ವತ್ರಿಕ ಜನಪ್ರಿಯತೆಯನ್ನು ಪಡೆದುಕೊಂಡಿವೆ. ಹಲವು ಪ್ರಕಾರಗಳು ಆಯಾ ಪ್ರದೇಶಕ್ಕೆ ಮಾತ್ರವೇ ಸೀಮಿತವಾಗಿ ಉಳಿದುಕೊಂಡು ಬಂದಿವೆ. ಇಂತಹ ಪ್ರಾದೇಶಿಕ ಜನಪದ ಕಲೆಗಳಲ್ಲಿ ಕೆಲವನ್ನು ಆಯ್ದು ಈ ಕಿರುಹೊತ್ತಿಗೆಯಲ್ಲಿ ಬಣ್ಣದ ಛಾಯಾಚಿತ್ರಗಳೊಂದಿಗೆ ಪರಿಚಯಿಸಲಾಗಿದೆ. ಆದ್ದರಿಂದ ಆಯಾ ಭಾಗದ ಕಲೆಗಳು ಎಂದಾಗ ಇದು ಸಮಗ್ರವಲ್ಲ. ಕೇವಲ ಪ್ರಾತಿನಿಧಿಕ ಕಲೆಗಳ ಪರಿಚಯವಷ್ಟೆ.

ಕರ್ನಾಟಕ ಜಾನಪದ ಪರಿಷತ್ತು ಜನಪ್ರಿಯ ಜಾನಪದ ಪುಸ್ತಕ ಮಾಲೆಯಲ್ಲಿ ಜಾನಪದದ ವಿವಿಧ ಸಂಗತಿಗಳನ್ನು ಕುರಿತು ಪರಿಚಯಿಸುವ ಸಲುವಾಗಿ ಕಿರುಹೊತ್ತಿಗೆಗಳನ್ನು ಪ್ರಕಟಿಸುತ್ತಿರುವುದು ಪ್ರಶಂಸಾರ್ಹ. ಇಂತಹ ಕಿರುಹೊತ್ತಿಗೆಗಳು ಮಕ್ಕಳಿಂದ ಮೊದಲುಗೊಂಡು ನವ ಸಾಕ್ಷರರವರೆಗೂ ಅರಿವು ಮೂಡಿಸುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಈ ಕಿರುಹೊತ್ತಿಗೆಗಳ ಪ್ರಕಟಣೆಗೆ ಕಾರಣರಾದ ಕರ್ನಾಟಕ ಜಾನಪದ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳು ಮತ್ತು ಗ್ರಂಥ ಪ್ರಕಟಣಾ ಸಮಿತಿ ಸದಸ್ಯರುಗಳಿಗೆ ಹೃತ್ಪೂರ್ವಕ ಧನ್ಯವಾದಗಳು.

ಡಾ. ಚಕ್ಕೆರೆ ಶಿವಶಂಕರ್

ಕರಗ

ಕ್ರಿ.ಶ. ಹನ್ನೆರಡನೆಯ ಶತಮಾನಕ್ಕೂ ಹಿಂದೆಯೇ ತಮಿಳುನಾಡಿನಿಂದ ಕನ್ನಡನಾಡಿಗೆ ವಲಸೆ ಬಂದು, ತಿಗಳರೆಂದು ನಾಡವರ ಬಾಯಿಯಲ್ಲಿ ಕರೆಸಿಕೊಳ್ಳುವ ಅಗ್ನಿಕುಲ ಪೂಜಕರು ಪ್ರತೀ ವರ್ಷ ಚೈತ್ರಮಾಸದ ಹುಣ್ಣಿಮೆಯೆಂದು ಯುಗಾದಿ ಹಬ್ಬದ ನಂತರ ಹುಣ್ಣಿಮೆಯ ರಾತ್ರಿ ನಡೆಸುವ ಶಕ್ತಿ ಆರಾಧನೆಯೇ ಕರಗ. ಚೈತ್ರ ಮಾಸದ ಹುಣ್ಣಿಮೆಯಂದು ಆರಂಭವಾಗಿ ಬಿದಿಗೆಯಂದು ಕೊನೆಗೊಳ್ಳುವ ಕರಗದ ಆಚರಣೆಗಳು ಹನ್ನೆರಡು ದಿನಗಳ ಕಾಲ ಅತ್ಯಂತ ಸಂಭ್ರಮದಿಂದ ನಡೆಯುತ್ತವೆ.



ಕರಗ ಎಂದರೆ ಮಣ್ಣಿನ ಗಡಿಗೆ, ಕುಂಭ, ಕಳಶ ಮೊದಲಾದ ಅರ್ಥಗಳಿದ್ದು, ಅಗ್ನಿಕುಲ ಕ್ಷತ್ರಿಯರು ತಮ್ಮ ಕುಲದೇವತೆಯಾದ ಆದಿಶಕ್ತಿ ಸ್ವರೂಪಿಣಿ ದ್ರೌಪದಿಯನ್ನು ಕರಗದಲ್ಲಿ ಆವಾಹನೆ ಮಾಡಿ

ಪೂಜಿಸಿ ಆರಾಧಿಸುವುದೇ ಕರಗದ ವೈಶಿಷ್ಟ್ಯ ಕರಗ ಆರಾಧನೆಯ ಬಗ್ಗೆ ತಿಗಳ ಜನಾಂಗದಲ್ಲಿ ನಾನಾ ತರಹದ ಕಥೆಗಳು ರೂಢಿಯಲ್ಲಿವೆ.

ಅ) ದ್ರೌಪದಿ ಸ್ವಯಂವರದಲ್ಲಿ ಮಾರುವೇಷದಲ್ಲಿದ್ದ ಅರ್ಜುನನು ದ್ರೌಪದಿಯನ್ನು ವರಿಸಿದಾಗ, ಆಕೆಯ ತಲೆಯ ಮೇಲೆ ಕಳಶ ಧರಿಸಿದ್ದುದರಿಂದ, ಈ ನೆನಪಿಗಾಗಿ ಕರಗದ ಆರಾಧನೆ ನಡೆಯತ್ತದೆ.

ಆ) ಪಾಂಡವರ ಸ್ವರ್ಗಾರೋಹಣ ಪ್ರಸ್ಥಾನದಲ್ಲಿ, ಆಯಾಸ ಪೀಡಿತಳಾದ ದ್ರೌಪದಿ ಮಾರ್ಗಮಧ್ಯದಲ್ಲಿ ಮೂರ್ಛೆ ಹೋಗುತ್ತಾಳೆ. ದ್ರೌಪದಿಯು ಮೃತಳಾದಳೆಂದು ಭಾವಿಸಿದ ಪಾಂಡವರು ಆಕೆಯನ್ನು ಅಲ್ಲಿಯೇ ಬಿಟ್ಟು ಮುಂದೆ ಸಾಗುತ್ತಾರೆ. ಒಂಟಿ ಹೆಣ್ಣನ್ನು ಕಂಡ ತಿಮಿರಾಸುರನೆಂಬ ರಾಕ್ಷಸ ಆಕೆಯನ್ನು ಬಲಾತ್ಕರಿಸುತ್ತಾನೆ. ಸಿಟ್ಟಿಗೆದ್ದ ದ್ರೌಪದಿಯು ಆದಿಶಕ್ತಿ ರೂಪವನ್ನು ತಾಳಿ, ತಲೆಯ ಮೇಲೆ ಕಳಶ ಧರಿಸಿ ತಿಮಿರಾಸುರನನ್ನು ಸಂಹರಿಸುತ್ತಾಳೆ. ತಿಮಿರಾಸುರ ಸಂಹಾರದಲ್ಲಿ ದ್ರೌಪದಿ ಶಿರದಲ್ಲಿ ಕಳಶ ಧರಿಸಿದ್ದರ ನೆನಪಿಗೆ ಕರಗದ ಆಚರಣೆ ಜರುಗುತ್ತದೆ.

ಇ) ಪಾಂಡವರು ದ್ರೌಪದಿಯ ಶೀಲದ ಬಗ್ಗೆ ಸಂಶಯ ತಾಳಿ, ಆಕೆಯ ಪಾತಿವ್ರತ್ಯ ಪರೀಕ್ಷೆಗಾಗಿ ಪೋತಲು ಎಂಬ ರಾಜನಿಂದ ಕರಗವನ್ನು ತರಿಸುತ್ತಾರೆ. ದ್ರೌಪದಿಯು ಅರಿಶಿಣ ಬಟ್ಟೆ ಧರಿಸಿ ಕರಗವನ್ನು ತಲೆಯ ಮೇಲೆ ಹೊತ್ತು ಕೈಯಲ್ಲಿ ವೀರ ಚಾವಟಿ ಹಿಡಿದು ಅಗ್ನಿ ಪ್ರವೇಶ ಮಾಡಿ ತಾನು ಪತಿವ್ರತೆ ಎಂದು ಸಾಬೀತುಪಡಿಸುತ್ತಾಳೆ. ಈ ನೆನಪಿಗಾಗಿಯೂ ಸಹ ಕರಗದ ಆಚರಣೆ ನಡೆಯುತ್ತದೆ.

ಕರಗದ ಆರಾಧನೆಯು ಬೆಂಗಳೂರು ನಗರ, ಗ್ರಾಮಾಂತರ ಮತ್ತು ಕೋಲಾರ ಜಿಲ್ಲೆಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಬೆಂಗಳೂರಿನಲ್ಲಿ ನಡೆಯುವ ಕರಗವು ಸಾಮಾನ್ಯವಾಗಿ ಯುಗಾದಿಯ ನಂತರ ಬರುವ ಚೈತ್ರಮಾಸದ ಹುಣ್ಣಿಮೆಯಂದು ನಡೆಯುತ್ತದೆ. ಚೈತ್ರ

ಪೌರ್ಣಮಿಗೆ ೯ ದಿನಗಳ ಮೊದಲೇ ಧರ್ಮರಾಯರ ದೇವಸ್ಥಾನದ ಮುಂದೆ ಆದಿಶಕ್ತಿಯ ಚಾಚಿದ ನಾಲಿಗೆಯ ವಿನ್ಯಾಸದ ಧ್ವಜಾರೋಹಣದೊಂದಿಗೆ ಕರಗದ ಆರಾಧನೆಯು ಆರಂಭವಾಗುತ್ತದೆ. ಎರಡನೆಯ ದಿನದಂದು ದೀಪಾರತಿ ಉತ್ಸವ. ಈ ಉತ್ಸವದಲ್ಲಿ ಗರಡಿ ಮನೆಗಳ ಯುವಕರು ಮೆರವಣಿಗೆಯಲ್ಲಿ ಪಾಲ್ಗೊಂಡು ದೊಣ್ಣೆವರಸೆ, ಕತ್ತಿವರಸೆ, ಬಿಜಲಿ ವರಸೆ, ಬೆಂಕಿ ಭರಾಟೆಗಳನ್ನು ಪ್ರದರ್ಶಿಸುತ್ತಾರೆ. ತ್ರಯೋದಶಿ ದಿನ ಹಸಿ ಕರಗ. ಕುಲದ ಹಿರಿಯರು, ಕರಗದ ಪೂಜಾರಿ, ಗಂಟೆ ಪೂಜಾರಿ, ಗಣಾಚಾರಿ, ವೀರ ಕುಮಾರರೆಲ್ಲರೂ ಒಟ್ಟುಗೂಡಿ ದೇವಸ್ಥಾನದಿಂದ ಹೊರಟು ಸಂಪಂಗಿ ಕೆರೆ ಅಂಗಳಕ್ಕೆ ಬಂದು, ಅಲ್ಲಿ ಹಸಿ ಕರಗವನ್ನು ಸಿದ್ಧಪಡಿಸುತ್ತಾರೆ. ಚತುರ್ದಶಿಯಂದು ರಾತ್ರಿ ಪೊಂಗಲು ಸೇವೆ. ಈ ಸೇವೆಯಲ್ಲಿ ಮಹಿಳೆಯರದೇ ಪ್ರಧಾನಪಾತ್ರ.

ಪೌರ್ಣಮಿಯ ಮಧ್ಯರಾತ್ರಿ ಕರಗದ ಉತ್ಸವ. ಕರಗ ಹೊರುವ ಪೂಜಾರಿಗೆ ಅರಿಶಿಣ ಬಣ್ಣದ ಸೀರೆ ಉಡಿಸಿ, ಬಳೆ ತೊಡಿಸಿ, ಸ್ತ್ರೀ ವೇಷಧಾರಣೆ ಮಾಡಿ ತೋಳಿಗೆ ಕೆಂಪು ಬಟ್ಟೆಯನ್ನು ತೋಳಬಂದಿಯನ್ನಾಗಿ ಕಟ್ಟಿ ಮಲ್ಲಿಗೆ ಹೂವು ಮತ್ತು ಆಭರಣಗಳಿಂದ ಸಿಂಗರಿಸುತ್ತಾರೆ. ಮಧ್ಯರಾತ್ರಿಯ ನಂತರ ದ್ರೌಪದಿ ದೇವಿಯ ಪ್ರತೀಕವಾದ ಕರಗವು ದೇವಸ್ಥಾನದಿಂದ ಹೊರಡುತ್ತದೆ. ಮಲ್ಲಿಗೆ ಹೂವಿನಿಂದ ಅಲಂಕರಿಸಿದ ಕರಗವನ್ನು ಹೊತ್ತ ಪೂಜಾರಿಯು ಗರ್ಭಗುಡಿಯಿಂದ ಹೊರಬರುತ್ತಿದ್ದಂತೆ ಬಿಳಿಯ ಪೈಜಾಮ, ಸೊಂಟಕ್ಕೆ ಕೆಂಪುಬಟ್ಟೆ, ತಲೆಗೆ ಪೇಟ, ಹಣೆಗೆ ಬಿಳಿ ಮತ್ತು ಕೆಂಪು ನಾಮ, ಕೊರಳಿಗೆ ಮಲ್ಲಿಗೆ ಹೂವಿನ ಹಾರ, ಕೈಯಲ್ಲಿ ಬಿಚ್ಚುಗತ್ತಿ ಹಿಡಿದ ವೀರಕುಮಾರರು ದೇವಿಯ ಎದುರು ನಿಂತು ಬಲಗೈ ಕತ್ತಿಯಿಂದ ಬಲ ಎದೆ ಮತ್ತು ಬಲಭುಜದ ಮೇಲೆ ಮೂರು ಬಾರಿ, ಎಡ ಎದೆ ಮತ್ತು ಎಡ ಭುಜದ ಮೇಲೆ ಮೂರು ಬಾರಿ ಮತ್ತೆ ಬಲ ಭುಜದ ಬಲ

ಎದೆಯ ಮೇಲೆ ಹೊಡೆದುಕೊಳ್ಳುತ್ತಾ ಅಲಗು ಸೇವೆ ನಡೆಸುತ್ತಾರೆ. 'ಗೋವಿಂದಾ ಡಿ ಡಿಕ್–ಡಿ' ಎಂದು ಅಬ್ಬರದ ಘೋಷಣೆಗಳನ್ನು ಮೊಳಗಿಸುತ್ತಾರೆ. ನಗರ ಸಂಚಾರ ಮಾಡಿದ ಕರಗವು ಸೂರ್ಯೋದಯದ ವೇಳೆಗೆ ದೇವಸ್ಥಾನಕ್ಕೆ ಹಿಂದಿರುಗುತ್ತದೆ. ಪಾಡ್ಯದ ದಿನ ಸಂಜೆ ವಸಂತೋತ್ಸವದ ಓಕುಳಿಯಾಟ. ಬಿದಿಗೆಯಂದು ಗಾವು ಸಿಗಿಯುವುದು. ಅಂದೇ ಧ್ವಜಾವರೋಹಣದೊಂದಿಗೆ ಕರಗದ ಆರಾಧನಾ ಕಾರ್ಯಕ್ರಮಗಳ ಮುಕ್ತಾಯ.

ಧಾರ್ಮಿಕ ಶ್ರದ್ಧೆಯ ಹಿನ್ನಲೆಯಲ್ಲಿ ನಡೆಯುತ್ತಿದ್ದ ಕರಗದ ಆರಾಧನೆಯು ಕಾಲಕ್ರಮೇಣ ಮನರಂಜನಾ ಪ್ರಕಾರವಾಗಿಯೂ ಪರಿವರ್ತನೆ ಹೊಂದಿತು. ಚಂಬಿನ ಕರಗ, ಚಿತ್ರಗೋಪುರ ಕರಗ, ಒನಕೆ ಕರಗಗಳು ಮನರಂಜನಾ ಮಾಧ್ಯಮಗಳಾಗಿ ಪರಿಣಮಿಸಿದವು. ಪ್ರದರ್ಶನದ ಅಭಿವ್ಯಕ್ತಿಯಲ್ಲಿ ಒಂದಕ್ಕಿಂತ ಒಂದು ಭಿನ್ನವಾಗಿದ್ದು ಚಮತ್ಕಾರಕ್ಕೆ ಹೆಸರಾದವುಗಳಾಗಿವೆ. ಈ ಕರಗದ ಕುಣಿತಗಳಿಗೆ ತಮಟೆ, ನಗಾರಿ, ನಾಗಸ್ವರಗಳು ಹಿಮ್ಮೇಳದ ವಾದ್ಯಗಳು. ಗಂಡಸು ಮತ್ತು ಹೆಂಗಸು ಈರ್ವರೂ ಜೋಡಿಯಾಗಿ ಇಲ್ಲವೆ ಪ್ರತ್ಯೇಕವಾಗಿ ಇಂತಹ ಕರಗದ ಕುಣಿತಗಳನ್ನು ಪ್ರದರ್ಶಿಸುತ್ತಾರೆ.

೧) **ಚಂಬಿನ ಕರಗದ ಕುಣಿತ** : ಹೂವು – ಕುಂಕುಮಗಳಿಂದ ಅಲಂಕರಿಸಿದ ದುಂಡಾದ ಚೆಂಬನ್ನು ಯಾವುದೇ ಆಧಾರವಿಲ್ಲದೆ ತಲೆಯ ಮೇಲಿರಿಸಿಕೊಂಡು ವಿವಿಧ ಗತಿ ಗತ್ತುಗಳಲ್ಲಿ ಹಿಮ್ಮೇಳದ ವಾದ್ಯಗಳ ಲಯಕ್ಕೆ ತಕ್ಕಂತೆ ಕುಣಿಯುವುದೇ ಚಂಬಿನ ಕರಗದ ಕುಣಿತ. ಬುಳುಬುಳು ಉರುಳಾಡುವ ಚಂಬು ಕೆಳಗೆ ಬೀಳದಂತೆ ಗತ್ತುಗಳಲ್ಲಿ ಬಾಗುವುದು, ಓಲಾಡುವುದು, ಬಳುಕುವುದು, ಕೂರುವುದು, ಮಂಡಿಯೂರಿ ಕುಣಿಯುವುದು ಇತ್ಯಾದಿ ವಿವಿಧ ಭಾವಭಂಗಿಗಳನ್ನು ಪ್ರದರ್ಶಿಸುತ್ತಾರೆ. ಸಾಮಾನ್ಯವಾಗಿ ಈ ಕುಣಿತದಲ್ಲಿ ಹೆಂಗಸರಷ್ಟೇ

ಪಾಲ್ಗೊಳ್ಳುತ್ತಾರೆ. ಕಲಾವಿದರ ಬಣ್ಣ ಬಣ್ಣದ ಸೀರೆ, ಮುಖಕ್ಕೆ ಹಚ್ಚಿದ ವರ್ಣಾಲಂಕಾರ ಆಕರ್ಷಣೀಯವಾಗಿದ್ದು ಕುಣಿಯುವವರ ನೈಪುಣ್ಯ ಪ್ರೇಕ್ಷಕರನ್ನು ಬೆರಗುಗೊಳಿಸುತ್ತದೆ.

೨) ಚಿತ್ರಗೋಪುರ ಕರಗದ ಕುಣಿತ : ಗೋಪುರದ ಆಕಾರದಲ್ಲಿ ಹೆಣೆದಿರುವ ಬಿದಿರಿನ ಬುಟ್ಟಿಯನ್ನು ಪೂರ್ಣವಾಗಿ ಹೂವಿನಿಂದ ಅಲಂಕರಿಸಿ ಅದನ್ನು ತಲೆಯ ಮೇಲಿರಿಸಿಕೊಂಡು ವಿವಿಧ ಭಾವಭಂಗಿಗಳಲ್ಲಿ ಕುಣಿಯುತ್ತಾರೆ. ಇದನ್ನು ಚಿತ್ರಗೋಪುರ ಕರಗದ ಕುಣಿತ ಎಂದು ಕರೆಯಲಾಗುವುದು. ಈ ಕುಣಿತದಲ್ಲಿ ಗಂಡಸರು ಹೆಚ್ಚಾಗಿ ಪಾಲ್ಗೊಳ್ಳುತ್ತಾರೆ.

೩) ಒನಕೆ ಕರಗ : ಸುಮಾರು ಐದಾರು ಅಡಿ ಉದ್ದದ ಮೂರ್ನಾಲ್ಕು ಅಂಗುಲ ವ್ಯಾಸ ಇರುವ ದುಂಡನೆಯ ನಯಗೊಳಿಸಿದ ಮರದ ತುಂಡಿನ ಎರಡು ತುದಿಗಳಿಗೂ ಲೋಹದ 'ಹಣಸು'ಗಳನ್ನು ತೊಡಿಸಿದ್ದು, ತುಂಡಿನ ಮೇಲು ತುದಿಗೆ ಚಕ್ರವೊಂದನ್ನು ಅಡ್ಡಲಾಗಿಕಟ್ಟಿ ಅದರ ಸುತ್ತ ಹೂವಿನ ಮಾಲೆಗಳನ್ನು ಇಳಿಬಿಟ್ಟಿರುತ್ತಾರೆ. ಮರದ ತುಂಡಿನ ತುದಿಯನ್ನು ತಲೆಯ ಮೇಲಿರಿಸಿಕೊಂಡು ಹಿಮ್ಮೇಳದ ವಾದ್ಯಗಳ ಗತ್ತಿಗೆ ಅನುಗುಣವಾಗಿ ಗೆಜ್ಜೆ ಕಟ್ಟಿದ ಕಾಲುಗಳನ್ನು ಲಯಬದ್ಧವಾಗಿ ಕುಣಿಸುತ್ತಾರೆ. ಒನಕೆ ಕರಗದ ಕುಣಿತ ಕುಣಿಯುವ ಕಲಾವಿದರು ಕೆಂಪು ವಸ್ತ್ರದ ವೀರಗಾಸೆಯನ್ನು ಹಾಕಿ ಸೊಂಟಕ್ಕೆ ನಡುಪಟ್ಟಿಯನ್ನು ಕಟ್ಟಿರುತ್ತಾರೆ. ಕೊರಳಿಗೆ ಹಾರ, ಹಣೆಯಲ್ಲಿ ಗಂಧ, ಕುಂಕುಮಗಳನ್ನು ಧರಿಸಿರುತ್ತಾರೆ. ಒನಕೆಯನ್ನು ತಲೆಯ ಮೇಲಿರಿಸಿಕೊಂಡು ಕುಣಿಸುವಾಗ ತನ್ನ ಎರಡು ಕೈಗಳನ್ನು ಬಿಟ್ಟು ಬಿರುಸಾಗಿ ಕುಣಿಯುತ್ತಾರೆ. ಗಿರಗಿರನೆ ಗಿರಕಿ ಹೊಡಿಯುತ್ತಾರೆ. ಒನಕೆ ನೆತ್ತಿಯ ಮೇಲಿನಿಂದ ಕೆಳಗುರುಳದಂತೆ ಅದರ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿನ ಕೌಶಲ್ಯ, ಸಾಧನೆ, ಚಮತ್ಕಾರಗಳು

ಪ್ರಶಂಸಾರ್ಹವಾದವು. ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಮನರಂಜನೆಗಾಗಿ ತಮಟೆ ನಗಾರಿಗಳ ಸದ್ದಿಗೆ ತಕ್ಕಂತೆ ಒನಕೆಯನ್ನು ತಲೆಯ ಮೇಲಿರಿಸಿಕೊಂಡು ಕೈಬಿಟ್ಟು ಕುಣಿಯುವುದಲ್ಲದೆ ಹೆಗಲು, ಅಂಗೈ, ಹೆಬ್ಬೆರಳು ಮತ್ತು ಹಣೆಯ ಮೇಲಿಟ್ಟುಕೊಂಡು ಸಹ ಕುಣಿಯುತ್ತಾರೆ.

ಹೀಗೆ ಕರಗದ ಕುಣಿತವು ಶುದ್ಧ ಧಾರ್ಮಿಕ ಕುಣಿತವಾಗಿದ್ದರೂ ತನ್ನಲ್ಲಿರುವ ಮನರಂಜನಾತ್ಮಕ ಗುಣದಿಂದ ಲೌಕಿಕ ಕುಣಿತವಾಗಿ ಮಾರ್ಪಟ್ಟಿದೆ. ಇಂತಹ ಕುಣಿತಗಳ ಹಿಂದೆ ಶ್ರಮ, ದುಡಿಮೆ, ಕೌಶಲ್ಯ, ಕಸರತ್ತುಗಳಿವೆ.

ಕೀಲು ಕುದುರೆ ಕುಣಿತ

ಜನಪದ ಕಥೆಗಳಲ್ಲಿ ಕಂಡುಬರುವ ಅಲೌಕಿಕ ಕಲ್ಪನೆಯನ್ನು ಮನರಂಜನೆಯ ಸಾಧನವನ್ನಾಗಿ ಬಳಸಿಕೊಂಡ ಜನಪದ ಕಲಾವಿದರ ಜಾಣ್ಮೆ ನಿಜಕ್ಕೂ ಮೆಚ್ಚತಕ್ಕದ್ದು. ಬೆಂಗಳೂರು, ಕೋಲಾರ, ಕೊಡಗು, ಮಂಡ್ಯ, ಮೈಸೂರು, ಬಳ್ಳಾರಿ, ಬಿಜಾಪುರ ಜಿಲ್ಲೆಗಳಲ್ಲಿ ಕಂಡುಬರುವ ಕೀಲುಕುದುರೆಕುಣಿತವು ಜಾತ್ಯಾತೀತ ಕಲೆ.

ಕೀಲು ಕುದುರೆಯನ್ನು ಬಿದಿರಿನ ದಬ್ಬೆ, ಮರದ ತಿರುಳು, ಕಾಗದದ ಗಂಜಿ, ಜೇಡಿ ಮಣ್ಣು ಬಳಸಿ ಸಿದ್ಧಪಡಿಸುತ್ತಾರೆ. ಕಾಲುಗಳನ್ನು ಬಿಟ್ಟು ಉಳಿದಂತೆ ಕುದುರೆಯ ಆಕಾರಕ್ಕೆ ಬಿದಿರಿನ ತೆಳುವಾದ ದಬ್ಬೆಗಳಿಂದ ಹೆಣೆಯುತ್ತಾರೆ. ರುಂಡದ ಭಾಗವನ್ನು ಕಾಗದದ ತಿರುಳಿನಿಂದ ತಯಾರಿಸುತ್ತಾರೆ, ಕುದುರೆಯು ಕುಣಿಯುವಾಗ ಅದರ ನಾಲಿಗೆಯು ಮೇಲಕ್ಕೆ ಕೆಳಕ್ಕೆ ಆಡುವಂತೆ ಕೀಲನ್ನು ಅಳವಡಿಸುತ್ತಾರೆ. ಕುದುರೆಯ ಮಂಡದ ಒಳಭಾಗವು ಟೊಳ್ಳಾಗಿರುತ್ತದೆ.

ಕೀಲು ಕುದುರೆ ಕುಣಿತದಲ್ಲಿ ಎರಡು ಕುದುರೆಗಳಿರುತ್ತವೆ. ಕಲಾವಿದರು ರಾಜರಾಣಿಯರಂತೆ ಕಿರೀಟ, ಭುಜಕೀರ್ತಿ, ಎದೆಹಾರ,



ಸೊಂಟಕ್ಕೆ ಡಾಬು, ವೀರಗಚ್ಚೆ ಮೊದಲಾದ ರಾಜಯೋಗ್ಯ ಪೋಷಾಕುಗಳನ್ನು ಧರಿಸಿ ಮುಖಕ್ಕೆ ನಸುಗೆಂಪು ಬಣ್ಣ ಹಚ್ಚಿಕೊಂಡಿರುತ್ತಾರೆ. ಕುದುರೆಯ ಗೊರಸುಗಳಂತೆ ಕಾಣುವ, ಹಗುರವಾದ ಮರದಿಂದ ಮಾಡಿದ ಎರಡು ಅಡಿ ಉದ್ದದ ಮರಗಾಲುಗಳನ್ನು ಕಾಲಿಗೆ ಕಟ್ಟಿಕೊಂಡಿರುತ್ತಾರೆ. ಕುದುರೆ ಆಕಾರದ ಕೀಲು ಕುದುರೆಗಳಿಗೆ ಅದೇ ಅಳತೆಯ ಬಣ್ಣಬಣ್ಣದ ಗೌನನ್ನು ಹೊದಿಸಿರುತ್ತಾರೆ. ವೇಷಭೂಷಣಗಳನ್ನು ತೊಟ್ಟ ಕಲಾವಿದರು ಕುದುರೆಯ ಬೆನ್ನಿನ ಭಾಗದಲ್ಲಿ ಮಾಡಿದ ಸಂದಿಯಲ್ಲಿ ಸೇರಿ ತಮ್ಮ ಹೆಗಲುಗಳಿಗೆ ಕುದುರೆಯ ದಬ್ಬೆಯ ದೇಹವನ್ನು ಬಿಗಿದುಕೊಳ್ಳುತ್ತಾರೆ. ಕೈಯಲ್ಲಿ ಲಗಾಮು ಹಿಡಿದು ಕುದುರೆಯ ತಲೆ ಬಾಲಗಳನ್ನು ಹಿಂದಕ್ಕೆ

ಮುಂದಕ್ಕೆ, ಮೇಲಕ್ಕೆ ಕೆಳಕ್ಕೆ ಜಗ್ಗಾಡಿಸುತ್ತಾ ಕುಣಿಸುತ್ತಾರೆ. ಬಾಗುವುದು, ಬಳುಕುವುದು, ವರ್ತುಲಾಕಾರದಲ್ಲಿ ಸುತ್ತಾಡಿಸುವುದು ಇತ್ಯಾದಿಗಳನ್ನು ನೋಡಿದಾಗ ನಿಜವಾದ ಕುದುರೆಗಳೇ ಕುಣಿಯುತ್ತಿರುವಂತೆ ಭಾಸವಾಗುತ್ತದೆ.

ಸಾರ್ವಜನಿಕ ಸಮಾರಂಭಗಳಲ್ಲಿ ನಾಗಸ್ವರ, ಡೋಲು, ತಮಟೆ ಮೊದಲಾದ ವಾದ್ಯಗಳ ಹಿಮ್ಮೇಳದೊಂದಿಗೆ ನಡೆಯುವ ಕೀಲುಕುದುರೆ ಕುಣಿತವು ಆಕರ್ಷಣೀಯ, ಜನಪ್ರಿಯ ಮನರಂಜನಾ ಪ್ರಕಾರ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡು ಬರುವ 'ಕುದುರೆ ಕೋಲ'ವು ಇದೇ ಮಾದರಿಯ ಕುಣಿತ ಪ್ರಕಾರವಾಗಿದೆ.

ಕೋಲಾಟ

ಬಹುಶಃ ಕೋಲಾಟ ಇಲ್ಲದ ಊರುಗಳೇ ಇಲ್ಲ. ಕರ್ನಾಟಕದ ಮೂಲೆ ಮೂಲೆಗಳಲ್ಲಿಯೂ ಕೋಲಾಟ ರೂಢಿಯಲ್ಲಿದೆ. ಸುಗ್ಗಿಯ ದಿನಗಳಲ್ಲಿ ಬೆಳದಿಂಗಳ ರಾತ್ರಿಗಳಲ್ಲಿ ಅಂದಂದಿನ ದಂದುಗಕ್ಕೆ ಮೈಸೋತು ಮನ ಸೋತ ಮಂದಿ ಮನರಂಜನೆಗಾಗಿ ಕೋಲು ಹುಯ್ಯುವುದುಂಟು. ಕೈಯಲ್ಲಿ ಹಿಡಿಯಲು ಅನುಕೂಲವಾಗುವಂತೆ ಸುಲಭ ಅಳತೆಯ ಕೋಲುಗಳನ್ನು ಹಿಡಿದು, ಕಾಲಿಗೆ ಗೆಜ್ಜೆ ಕಟ್ಟಿ, ಹಾಡುಗಳನ್ನು ಹಾಡುತ್ತಾ, ಕುಣಿಯುತ್ತಾ, ಕೋಲು ಹುಯ್ಯುವ ರೀತಿ ಆಕರ್ಷಣೀಯವಾದುದು.

ಗಂಡಸರು ಮತ್ತು ಹೆಂಗಸರು ಪ್ರತ್ಯೇಕವಾಗಿ ಇಲ್ಲವೆ ಒಟ್ಟಾಗಿ ಸೇರಿ ಎದುರುಬದುರಾಗಿ ನಿಂತು ಕೈಯಲ್ಲಿ ಹಿಡಿದ ಕೋಲುಗಳನ್ನು ದೇಹದ ವಿವಿಧ ಭಾಗಗಳ ಬಳಿ ಅಂದರೆ ತಲೆಯ ಮೇಲೆ, ಹೆಗಲ ಬಳಿ, ಸೊಂಟದ ಹಿಂಭಾಗ, ಮೊಳಕಾಲ ಬಳಿ, ಕಾಲಿನ ಕೆಳಗೆ ಹುಯ್ಯುತ್ತಾ ಅಥವಾ ಸಂಗಾತಿಗಳು ಹಿಡಿದಿರುವ ಕೋಲುಗಳಿಗೆ ವಿವಿಧ



ವಿನ್ಯಾಸಗಳಲ್ಲಿ, ಲಯಗಳಲ್ಲಿ ತಾಡಿಸುತ್ತಾ, ಹಾಡುತ್ತಾ ಕುಣಿಯುವ ಕುಣಿತವೇ ಕೋಲಾಟ. ಕ್ರಮಬದ್ಧವಾದ ಪರಸ್ಪರ ಕೋಲುಗಳ ತಾಡನ, ಗೆಜ್ಜೆ ಕಟ್ಟಿದ ಕಾಲುಗಳ ಲಯಬದ್ಧ ಪದಗತಿ ಮತ್ತು ಹಿನ್ನೆಲೆಯ ಹಾಡುಗಳು ಇವು ಮೂರರಿಂದಾಗಿ ಕೋಲಾಟವು ಹೆಚ್ಚು ಜನಪ್ರಿಯತೆಯನ್ನು ಪಡೆದಿದೆ. ಕೋಲಾಟಕ್ಕೆ ಇಂತಿಷ್ಟೇ ಜನರಿರಬೇಕೆಂಬ ನಿಯಮವೇನಿಲ್ಲ. ಆದರೆ ಸಮಸಂಖ್ಯೆಯಲ್ಲಿರಬೇಕು, ಅಷ್ಟೆ. ಕೋಲು ಹಿಡಿಯುವ ಮುನ್ನ ಕಲಾವಿದರುಗಳೆಲ್ಲಾ ವರ್ತುಲಾಕಾರವಾಗಿ ಸೇರಿ, ರಂಗದ ಮಧ್ಯೆ ಕೋಲುಗಳನ್ನು ಇರಿಸಿ, ಪೂಜಿಸಿ, ಕೋಲು ಮೇಳದ ಗುರುವಿಗೆ ವಂದಿಸಿ ತಮಗಿಷ್ಟವಾದ ಪ್ರಕಾರಕ್ಕೆ ಅನುಗುಣವಾಗಿ ಕೋಲಾಟವಾಡಲು ಪ್ರಾರಂಭಿಸುತ್ತಾರೆ. ಕೋಲ ಗುರು ಪೌರಾಣಿಕ,

ಚಾರಿತ್ರಿಕ, ಲೌಕಿಕ ಪದಗಳನ್ನು ಹಾಡುತ್ತಾರೆ. ಕಲಾವಿದರು ಕೋಲಾಟದೊಂದಿಗೆ ಈ ಹಾಡುಗಳನ್ನು ಪುನರಾವರ್ತಿಸುತ್ತಾರೆ. ಹಾಡಿನ ಮಧ್ಯೆ 'ಥಯ್ಯ', 'ಉಡುದಯ್ಯ' ಎನ್ನುವ ನುಡಿಗಟ್ಟುಗಳು ಕೇಳಿಬರುತ್ತವೆ. ಪ್ರತಿಯೊಂದು ಪದ ಮತ್ತು ಕೋಲಾಟದ ಗತ್ತು ಮುಗಿಯುತ್ತಿದ್ದಂತೆಯೇ 'ತಾಕಿತು ತಗಲಿತು ಯಾಕಿಂಗಾಯಿತು ಥಯ್ಯ ಥಯ್ಯ ಥಗಡದತ್ತಯ್ಯ' ಎಂದು ಹೇಳುತ್ತಾರೆ.

ಕೋಲಾಟ ಆಡಲು ನಿರ್ದಿಷ್ಟ ಕಾಲ ಎಂಬುದಿಲ್ಲ. ಹಬ್ಬಹರಿದಿನಗಳು, ಉತ್ಸವಗಳು, ಮದುವೆ ಸಮಾರಂಭ ಯಾವುದಾದರೂ ಸರಿಯೆ. ಕಣಿಕಣಿ ಎಂದು ಸದ್ದು ಮಾಡುವ ಕೋಲುಗಳನ್ನು ಕಾರೆ, ಆಲೆ, ಬೈನೆ, ತೇಗದ ಮರಗಳಿಂದ ತಯಾರಿಸುತ್ತಾರೆ. ಇವು ಸುಲಭ ಪೆಟ್ಟಿಗೆ ಮುರಿಯುವಂಥವಲ್ಲ. ಇವುಗಳಿಗೆ ಬಣ್ಣ ಹಚ್ಚಿ ಗಿಲೀಟು ಮಾಡುವುದೂ ಉಂಟು. ಕೋಲಾಟ ಆಡುವವರು ತಮ್ಮ ಎರಡೂ ಕಾಲುಗಳಿಗೂ ಸರಗೆಜ್ಜೆಗಳನ್ನು ಕಟ್ಟಿಕೊಳ್ಳುತ್ತಾರೆ. ಮೊಳಕಾಲಿನವರೆಗೆ ಎತ್ತಿ ಕಟ್ಟಿದ ಏರುಗಚ್ಚೆ, ಕಸೆ ಅಂಗಿ, ಸೊಂಟಕ್ಕೆ ಅಡ್ಡಲಾಗಿ ಸುತ್ತಿದ ವಸ್ತ್ರ ಇವಿಷ್ಟು ವೇಷಭೂಷಣಗಳು. ಕೆಲವರು ತಲೆಗೆ ಕೆಂಪು ಪಟ್ಟಿಯನ್ನು ಕಟ್ಟಿಕೊಳ್ಳುವುದುಂಟು. ಕೋಲಾಟದಲ್ಲಿ ದಮ್ಮಡಿ ಮತ್ತು ತಾಳಗಳು ಹಿಮ್ಮೇಳದ ವಾದ್ಯಗಳು. ಕೋಲುಪದಗಳಿಗೆ ಹೆಚ್ಚಿನ ಪ್ರಾಮುಖ್ಯತೆ. ವಿನೋದ, ಪ್ರಣಯ, ಶೃಂಗಾರ, ದುರಂತ ವಸ್ತುಗಳನ್ನು ಒಳಗೊಂಡ ಕೋಲುಪದಗಳು ಕೋಲಾಟದ ಅವಿಭಾಜ್ಯ ಅಂಗ.

ಕೋಲಾಟವು ಮೇಲುನೋಟಕ್ಕೆ ಲೌಕಿಕ ಕಲೆಯಾಗಿ ಗೋಚರಿಸಿದರೂ, ಒಳಹೊಕ್ಕು ನೋಡಿದಾಗ ಇದೊಂದು ಸಾಹಸ ಕಲೆ. ದೊಣ್ಣೆವರಸೆ, ಕತ್ತಿವರಸೆಗಳಂತೆ ಶಾರೀರಿಕ ಬಲ ಮತ್ತು ಬುದ್ಧಿಯ ಕೌಶಲ್ಯಗಳೆರಡೂ ಕೋಲಾಟದಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಕೋಲಾಟದ

ಹೆಜ್ಜೆಯ ಗತ್ತುಗಳು, ಸೊಂಟದ ಬಾಗು-ಬಳುಕುಗಳು, ಕೈಚಳಕ, ಹಾರುವಿಕೆ, ಕುಪ್ಪಳಿಸುವಿಕೆ, ಜಿಗಿತ ಎಲ್ಲವೂ ಸಾಹಸ ಕಲೆಯಲ್ಲಿ ಪ್ರದರ್ಶನಗೊಳ್ಳುವಂತಹ ಚಟುವಟಿಕೆಗಳಾಗಿವೆ.

ಕೋಲಾಟಕ್ಕೆ ಕಾಡುಗೊಲ್ಲರ ಜನಾಂಗವು ಹೆಸರುವಾಸಿಯಾದರೂ, ಇದು ಜಾತ್ಯಾತೀತ ಜನಪದ ಕಲೆ. ಎಲ್ಲಿ ಬೇಕಾದರಲ್ಲಿ ಬಿಡುವು ದೊರೆತಾಗ ಕಾಲಿಗೆ ಗೆಜ್ಜೆ ಕಟ್ಟಿ ಕೋಲುಗಳೆರಡನ್ನು ಕೈಯಲ್ಲಿ ಹಿಡಿದರಾಯಿತು. ಸರಳ ಮತ್ತು ಸುಂದರ ಕಲೆಯಾಗಿರುವುದರಿಂದಲೇ ಇದರ ಜನಪ್ರಿಯತೆ ಅಪಾರ, ವ್ಯಾಪಕತೆ ಸರ್ವತ್ರ. ಕೋಲಾಟದಲ್ಲಿ ಗೀರುಕೋಲು, ಜಡೆಕೋಲು, ಉಯ್ಯಾಲೆಕೋಲು, ಕೊರವಂಜಿ ಕೋಲು, ಸುತ್ತುಕೋಲು, ಹಾರಗಡ್ಡಿ, ಗೆಜ್ಜೆಕೋಲು, ಚಿತ್ತಾರದ ಕೋಲು, ತೇರು ಕೋಲು, ಕತ್ತಿಕೋಲು, ನೀರುಕೋಲು ಮುಂತಾದ ಹಲವಾರು ಪ್ರಕಾರಗಳಿವೆ.

ಗಾರುಡಿಗೊಂಬೆ ಕುಣಿತ

ಗಾರುಡಿಗೊಂಬೆ, ತಟ್ಟೀರಾಯ, ಮಾನು ಬೊಂಬಲು ಇತ್ಯಾದಿ ಹೆಸರುಗಳಿಂದ ಕರೆಯುವ ಗಾರುಡಿಗೊಂಬೆ ಕುಣಿತವು ಮಂಡ್ಯ, ಮೈಸೂರು, ಶಿವಮೊಗ್ಗ, ತುಮಕೂರು, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಹಬ್ಬ ಹರಿದಿನ, ಜಾತ್ರೆ-ಉತ್ಸವಗಳಂತಹ ಸಾರ್ವಜನಿಕ ಸಮಾರಂಭಗಳಲ್ಲಿ ಜನರನ್ನು ರಂಜಿಸುವ ಸಲುವಾಗಿ ಈ ಕುಣಿತವನ್ನು ಪ್ರದರ್ಶಿಸುವರು.

ಬಿದಿರಿನ ತಡಿಕೆ, ಹಗುರವಾದ ಮರ, ಕಾಗದ ಮತ್ತು ಮರದ ತಿರುಳನ್ನು ಅರೆದು ಮೇಣ ಇಲ್ಲವೆ ಜೇಡಿಮಣ್ಣಿನಲ್ಲಿ ಕಲೆಸಿ ಮನುಷ್ಯಾಕೃತಿಯಲ್ಲಿ ಸುಮಾರು ಹತ್ತರಿಂದ ಹದಿನೈದು ಅಡಿ ಎತ್ತರದ ಗೊಂಬೆಗಳನ್ನು ತಯಾರಿಸುತ್ತಾರೆ. ಗೊಂಬೆಗಳ ಮುಖಕ್ಕೆ

ಚಿತ್ತಾಕರ್ಷಕವಾದ ನಸುಗೆಂಪು ಬಣ್ಣ ಬಳಿದಿರುತ್ತಾರೆ. ಮೈಮೇಲೆ ಬಣ್ಣಬಣ್ಣದ ವಸ್ತ್ರಗಳನ್ನು ತೊಡಿಸಿದ್ದು, ಸೊಂಟದ ಕೆಳಭಾಗಕ್ಕೆ ಉದ್ದನೆಯ ಲಂಗ ಇರುತ್ತದೆ. ಗೊಂಬೆಗಳ ಎದೆ ಭಾಗ ಇಲ್ಲವೆ ಸೊಂಟದ ಮಧ್ಯಭಾಗದಲ್ಲಿ ಸಣ್ಣ ಕಿಂಡಿಗಳಿದ್ದು ಗೊಂಬೆಗಳನ್ನು ಹೊತ್ತು ಕುಣಿಯುವವರು ಈ ರಂಧ್ರಗಳಿಂದ ಹೊರಗಡೆ ನೋಡುತ್ತಾ ಕುಣಿಸುತ್ತಾರೆ. ಕಲಾವಿದರು ಗೊಂಬೆಗಳನ್ನು ಹೊತ್ತು ಕುಣಿಯುವಾಗ ಗೊಂಬೆಗಳಿಗೆ ತೊಡಿಸಿದ ಉದ್ದನೆಯ ಲಂಗವು ಅವರನ್ನು ಪ್ರೇಕ್ಷಕರಿಗೆ ಕಾಣದಂತೆ ಮರೆ ಮಾಡುತ್ತದೆ. ಇದರಿಂದ ಬೃಹತ್ತಾದ ಗೊಂಬೆಗಳೇ ಜೀವ ತಳೆದು ನರ್ತಿಸುತ್ತಿವೆಯೇನೋ ಎನ್ನುವಂತೆ ನೋಡುಗರಿಗೆ ಭಾಸವಾಗುತ್ತದೆ.



ಗಾರುಡಿಗೊಂಬೆಗಳಲ್ಲಿ ಯಾವಾಗಲೂ ಒಂದು ಹೆಣ್ಣು, ಒಂದು ಗಂಡು ಗೊಂಬೆ ಜೊತೆಯಾಗಿರುತ್ತವೆ. ಗಂಡು ಗೊಂಬೆಗೆ ಪೇಟ, ಅಂಗಿ ತೊಡಿಸಿ ಕೆಳಭಾಗಕ್ಕೆ ಪಂಚೆಯಂತೆ ಒಂದು ಬಟ್ಟೆಯನ್ನು ಸುತ್ತಿರುತ್ತಾರೆ.

ಹೆಣ್ಣುಗೊಂಬೆಗೆ ರವಿಕೆ ತೊಡಿಸಿ ಕೆಳಭಾಗಕ್ಕೆ ಉದ್ದನೆಯ ಲಂಗ ಇಳಿಬಿಟ್ಟಿರುತ್ತಾರೆ. ಮೇಲುಭಾಗದಲ್ಲಿ ಸೀರೆಯ ಸೆರಗನ್ನು ಇಳಿಬಿಟ್ಟಿದ್ದು ನಡುವಿಗೆ ಸಿಕ್ಕಿಸಿರುತ್ತಾರೆ. ಗಂಡು ಗೊಂಬೆಯು ಪುಂಗಿ ಊದುವ ಭಂಗಿಯಲ್ಲಿದ್ದರೆ, ಹೆಣ್ಣುಗೊಂಬೆಯು ಸೊಂಟದ ಮೇಲೆ ಕೈಯಿಟ್ಟು ಇನ್ನೇನು ನರ್ತನಕ್ಕೆ ಸಿದ್ಧಳೆನ್ನುವ ಹಸನ್ಮುಖ ಭಂಗಿಯಲ್ಲಿರುತ್ತದೆ. ಗೊಂಬೆಗಳನ್ನು ಹೊತ್ತ ಕಲಾವಿದರು ತಮಟೆ, ಡೋಲು, ವಾಲಗ ಮೊದಲಾದ ಹಿಮ್ಮೇಳದ ವಾದ್ಯಗಳ ಸದ್ದಿಗೆ ಅನುಗುಣವಾಗಿ ಹಿಂದಕ್ಕೆ, ಮುಂದಕ್ಕೆ ವಾಲಾಡುತ್ತಾ ಕುಣಿಯುತ್ತಾರೆ. ರಾಕ್ಷಸಾಕಾರದ ಗೊಂಬೆಗಳನ್ನು ಹೊತ್ತು ಬಾಗುತ್ತಾ, ಬಳಕುತ್ತಾ ಕುಣಿಯುವುದನ್ನು ಕಂಡಾಗ ಪ್ರೇಕ್ಷಕರಲ್ಲಿ ಆಶ್ಚರ್ಯ, ಬೆರಗುಗಳು ಮೂಡುತ್ತವೆ.

ಚಿಟ್‌ಮೇಳ

ದಕ್ಷಿಣ ಕರ್ನಾಟಕದ ತುಮಕೂರು, ಹಾಸನ, ಶಿವಮೊಗ್ಗ ಜಿಲ್ಲೆಗಳಲ್ಲಿ ಕಂಡುಬರುವ ಚಿಟ್ ಮೇಳವು ಜನಪದ ವಾದ್ಯಮೇಳ. ಉತ್ತರ ಕರ್ನಾಟಕದ ಕರಡೆ ಮಜಲಿನ ಪರಿಷ್ಕೃತ ರೂಪ ಎಂದರೂ ಸರಿಯೆ. ಆದರೆ ಕರಡೆ ಮಜಲಿಗಿಂತಲೂ ಹೆಚ್ಚು ಆಕರ್ಷಕವಾದ ಮೇಳವಿದು. ಕಲಾವಿದರು ಬಿಳಿಯ ನಿಲುವಂಗಿ, ವೀರಗಚ್ಚೆ, ನಡುಪಟ್ಟಿ, ಬಿಳಿಯ ರುಮಾಲುಗಳನ್ನು ಧರಿಸಿರುತ್ತಾರೆ. ಚಿಟ್ ಮೇಳದಲ್ಲಿ ಒಟ್ಟು ಹತ್ತು ಮಂದಿ ವಾದ್ಯಗಾರರಿರುತ್ತಾರೆ. ಇಬ್ಬರು ಸೊಂಟಕ್ಕೆ ಕರಡೆಗಳನ್ನು ಕಟ್ಟಿಕೊಂಡರೆ, ಮೂವರು ಡೋಲುಗಳನ್ನು ಇನ್ನಿಬ್ಬರು ಸಮಾಳ ಮತ್ತು ಜಲ್ಲರಿಗಳನ್ನು ಹಿಡಿದಿದ್ದು, ಶೃತಿ ಮತ್ತು ನಾಗಸ್ವರ ಊದುವವರು ಇರುತ್ತಾರೆ. ಇವರಲ್ಲಿ ಇಬ್ಬರು ಪಂಚಮವಾದ್ಯ ನುಡಿಸಿದರೆ ಮತ್ತೊಬ್ಬ ಶೃತಿ ನೀಡುತ್ತಾನೆ. ಒಬ್ಬ ಕರಡೆ ಬಾರಿಸಿದರೆ ಮತ್ತಿಬ್ಬರು ಡೋಲು

ಬಾರಿಸುತ್ತಾರೆ. ಒಬ್ಬ ಡಂಕ ನುಡಿಸಿದರೆ ಚಿಟಿಕೆ ತಾಳ ಹಿಡಿದವನು ಅದನ್ನು ಅನುಕರಿಸುತ್ತಾನೆ. ಹೀಗೆ ಕ್ರಮಬದ್ಧವಾಗಿ ವಾದ್ಯಮೇಳವು ನಡೆಯುತ್ತದೆ.



ಚಿಟಕಿ ಜಾಲರಿ ಹಿಡಿದ ಕಲಾವಿದನು ಚಿಟ್ ಮೇಳದ ನಿರ್ದೇಶಕನಾಗಿದ್ದು, ವಾದ್ಯದ ಗತ್ತುಗಳನ್ನು ಬದಲಾಯಿಸಲು ಸೂಚನೆ ನೀಡುವುದು ಮತ್ತು ಆತನ ಸಂಜ್ಞೆಯನ್ನು ಅನುಸರಿಸಿ ವಾದ್ಯದವರು ತಮ್ಮ ಧಾಟಿಗಳನ್ನು ಬದಲಾಯಿಸುತ್ತಾರೆ. ಕಲಾವಿದರು ಮೈ ಕೈ ಕುಲುಕಿಸಿ ಹಿಂದಕ್ಕೆ ಮುಂದಕ್ಕೆ ಬಾಗಿ ಬಳುಕಿ ಕುಣಿಯುತ್ತಾರೆ. ಒಬ್ಬರ ಹಿಂದೆ ಒಬ್ಬರಂತೆ ಮೂರು ನಾಲ್ಕು ಸಾಲುಗಳಲ್ಲಿ ನಿಂತು ವೃತ್ತಾಕಾರವಾಗಿ ಕುಣಿಯುತ್ತಾ ವಾದ್ಯಗಳನ್ನು ಬಾರಿಸುತ್ತಾರೆ.

ಗ್ರಾಮೀಣ ಭಾಗದ ಜನಪದ ವಾದ್ಯಮೇಳವಾದ ಚಿಟ್ ಮೇಳದಲ್ಲಿ ಜನಪದ ವಾದ್ಯ ಸಂಗೀತದ ಹಿರಿಮೆ ವ್ಯಕ್ತವಾಗುತ್ತದೆ.

ಸಾಮಾನ್ಯವಾಗಿ ಚಿಟ್ ಮೇಳವನ್ನು ಹಬ್ಬ ಹರಿದಿನ, ಜಾತ್ರೆ-ಉತ್ಸವಗಳಲ್ಲಿ ಪ್ರದರ್ಶಿಸುತ್ತಾರೆ.

ಡೊಳ್ಳು ಕುಣಿತ

ಕರ್ನಾಟಕದ ಬಿಜಾಪುರ, ಬಳ್ಳಾರಿ, ಬೆಳಗಾವಿ, ತುಮಕೂರು, ಚಿಕ್ಕಮಗಳೂರು, ಶಿವಮೊಗ್ಗ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಡೊಳ್ಳಿನ ಕುಣಿತವು ಗಂಡು ಕಲೆ ಎಂದು ಹೆಸರಾದದ್ದು. ಮೊದಲಿಗೆ ಕುರುಬ ಜನಾಂಗದೊಂದಿಗೆ ನೇರ ಸಂಬಂಧ ಹೊಂದಿದ್ದ ಈ ಕುಣಿತವು ಕ್ರಮೇಣ ದೀವರು, ಉಪ್ಪಾರರು, ನಾಯಕರು ಮತ್ತಿತರ ಜನಾಂಗಗಳಿಗೂ ವ್ಯಾಪಿಸಿತು. ಹಗುರವಾದ ಮರದ ಹೊಳವು ಮತ್ತು ಬಳೆಗಳು ಹಾಗೂ ಚರ್ಮದ ಬಾರುಗಳಿಂದ ಬಿಗಿದು ಕಟ್ಟಿ ತಯಾರಿಸಿದ ಬೃಹತ್ ಚರ್ಮವಾದ್ಯವಾದ ಡೊಳ್ಳಿಗೆ ದಿಲ್ಲಿಗೆ ಹೋದರೂ ಒಂದೇ ಕೈ ಪೆಟ್ಟು. ಡೊಳ್ಳು ಕುಣಿತದ ಕಲಾವಿದರು ದೊಡ್ಡದಾದ ಡೊಳ್ಳುಗಳನ್ನು ಸೊಂಟಕ್ಕೆ ಕಟ್ಟಿಕೊಂಡು ಗಟ್ಟಿಯಾದ ದುಂಡನೆಯ ಚಿಕ್ಕ ಕೋಲುಗಳಿಂದ ಬಾರಿಸುತ್ತಾರೆ. ಡೊಳ್ಳಿನ ಬಡಿತವು ಸಾಮಾನ್ಯವಾಗಿ 'ಗುಣಿ'ಯ ಲೆಕ್ಕದಲ್ಲಿರುತ್ತದೆ. ಒಂದು ಗುಣಿಗೆ ಮೊದಲ ಹೆಜ್ಜೆ ಎಂದು ಕರೆಯುತ್ತಾರೆ. ಬಲದ ಕೈನಲ್ಲಿ ಹಿಡಿದ ಚಿಕ್ಕ ಕೋಲಿನಿಂದ ಬಲಗಡೆಗೆ ಒಂದು ಹೊಡೆತ ಮತ್ತು ಎಡ ಬದಿಯಲ್ಲಿ ಬರಿಗೈನಿಂದ ಒಂದು ಪೆಟ್ಟು ಇವೆರಡೂ ಸೇರಿದರೆ ಒಂದು ಗುಣಿ ಎಂದರ್ಥ. ಈ ಗುಣಿಗಳು ಡೊಳ್ಳು ಬಡಿತದಲ್ಲಿ ಕ್ರಮೇಣ ಹೆಚ್ಚಾಗುತ್ತಾ ಹೋಗುತ್ತವೆ.

ಸಾವಾನ್ಯವಾಗಿ ಡೊಳ್ಳು ಬಾರಿಸುವವರು ದೇಹದ ಮೇಲುಭಾಗಕ್ಕೆ ಕರಿಯ ಕಂಬಳಿಯನ್ನು, ಸೊಂಟದ ಭಾಗಕ್ಕೆ ಮೊಳಕಾಲು ಮೇಲೆ ಬರುವಂತೆ ಕಚ್ಚೆ ಹಾಕಿದ ಪಂಚೆ ಉಡುತ್ತಾರೆ.

ಶಿವಮೊಗ್ಗ ಜಿಲ್ಲೆಯ ದೀವರು ಮತ್ತು ನಾಯಕ ಜನಾಂಗಗಳಿಗೆ ಸೇರಿದ ಕಲಾವಿದರು ಸೊಂಟಕ್ಕೆ ಕಚ್ಚೆ ಹಾಕಿದ ಪಂಚೆಯನ್ನುಟ್ಟು ಮೇಲಿನ ಬರಿಮೈಗೆ ಸೊಪ್ಪು ಕಟ್ಟಿಕೊಳ್ಳುತ್ತಾರೆ. ಇಲ್ಲವೆ ಹುಲಿಯ ಚರ್ಮದ ರೀತಿಯ ದಿರಿಸು ಧರಿಸುತ್ತಾರೆ.

ಡೊಳ್ಳಿನ ಕುಣಿತವು ತನ್ನ ವಿಶಿಷ್ಟ ಶೈಲಿಗಳಿಂದಾಗಿ ಆಕರ್ಷಣೆಯಿಂದ ಕೂಡಿದೆ. ಕುಕ್ಕರಗಾಲಿನಲ್ಲಿ ಕುಳಿತು ಡೊಳ್ಳು ಬಾರಿಸುತ್ತಾ ಮುಂದಕ್ಕೆ ಕುಪ್ಪಳಿಸುವುದು, ಡೊಳ್ಳು ಬಾರಿಸುತ್ತಿದ್ದಂತೆ ಲಾಗಗಳನ್ನು ಹಾಕುವುದು, ಎಡಗಾಲು ಮಂಡಿಯನ್ನು ನೆಲಕ್ಕೊತ್ತಿ ಬಲಗಾಲನ್ನೂರಿಕೊಂಡು ಡೊಳ್ಳು ಬಾರಿಸುವುದು, ಒಂದಡಿ ಇಲ್ಲವೆ ಎರಡಡಿ ಎತ್ತರದ ಮರಗಾಲುಗಳನ್ನು ಕಟ್ಟಿಕೊಂಡು ಕುಪ್ಪಳಿಸುತ್ತಾ ಡೊಳ್ಳು ಬಾರಿಸುವುದು, ಬಾಯಲ್ಲಿ ನೀರು ತುಂಬಿದ ಕೊಡವನ್ನು ಕಚ್ಚಿಕೊಂಡು ನೀರು ಚಲ್ಲದಂತೆ ಡೊಳ್ಳು ಬಾರಿಸುತ್ತಾ ಕುಣಿಯುವುದು, ತಮ್ಮ ಸೊಂಟದ ಹಿಂದೆ-ಮುಂದೆ ಡೊಳ್ಳುಗಳನ್ನು ಕಟ್ಟಿಕೊಂಡು ಅದರ ಮೇಲೆ ಚಿಕ್ಕ ಮಕ್ಕಳುಗಳನ್ನು ಕೂರಿಸಿಕೊಂಡು ಡೊಳ್ಳು ಬಾರಿಸುತ್ತಾ ಕುಣಿಯುವುದು, ಡೊಳ್ಳು ನುಡಿಸುವ ಸಹ ಕಲಾವಿದರುಗಳನ್ನು ಹೆಗಲ ಮೇಲೆ ಕೂರಿಸಿಕೊಂಡು ಎಲ್ಲರೂ ಒಟ್ಟಿಗೇ ಡೊಳ್ಳು ಬಾರಿಸುವುದು. ಹೀಗೆ ಹತ್ತಾರು ಬಗೆಯ ವೈವಿಧ್ಯಮಯ ಕಸರತ್ತುಗಳನ್ನು ಡೊಳ್ಳು ಕಲಾವಿದರು ಪ್ರದರ್ಶಿಸುತ್ತಾರೆ. ಈ ಕಸರತ್ತುಗಳೇ ಅಲ್ಲದೆ, ಡೊಳ್ಳು ಕುಣಿತದಲ್ಲಿ ಕುದುರೆ ಕುಣಿತ, ಕೋಲು ಕುಣಿತ, ಸಾರು ಕುಣಿತ, ಹುಚ್ಚೆಳ್ಳು ಬಡಿತ, ಕೈ ಬಾರಿಕೆ, ಒಂದ್ಹೆಜ್ಜೆ-ಎರಡ್ಹೆಜ್ಜೆ ಕುಣಿತ, ಜೋಡುಸಾಲಿ, ಜಗ್ಗಿನ ಕೈಯಿ ಮೊದಲಾದ ವೈವಿಧ್ಯಮಯ ಕುಣಿತಗಳಿವೆ.

ಡೊಳ್ಳು ಕುಣಿತದಲ್ಲಿ ಬೃಹತ್ ಚರ್ಮವಾದ್ಯವಾದ ಡೊಳ್ಳಿನ ಜತೆಗೆ ಜೋಡು ಕಂಚಿನ ತಾಳ ಮತ್ತು ಹಿತ್ತಾಳೆಯ ಜಾಗಟೆ ವಾದನಕಾರರೂ




ಇರುತ್ತಾರೆ. ತಲೆಮಾರುಗಳಿಂದಲೂ ದೈವೀ ಆರಾಧನೆಯ ಸಂಪ್ರದಾಯವಾಗಿ ಬೀರಪ್ಪನ ಡೊಳ್ಳು ಎಂದೇ ಬೆಳೆದು ಬಂದ ಈ ಅದ್ಭುತ ಪ್ರದರ್ಶನ ಕಲೆಯು ಇತ್ತೀಚೆಗೆ ಧಾರ್ಮಿಕತೆಯ ಆವರಣದಿಂದ ಹೊರಬಂದು ಲೌಕಿಕ ಉತ್ಸವಗಳಿಗೆ ತೆರೆದುಕೊಂಡಿದೆ. ಇಂದು ಯಾವುದೇ ಸಮಾರಂಭವಾಗಲಿ, ಖಾಸಗಿ ಇರಲಿ ಅಥವಾ ಸಾರ್ವಜನಿಕವಿರಲಿ ಡೊಳ್ಳು ಕುಣಿತವಿಲ್ಲದೆ ಕಳೆಗಟ್ಟಲಾರದು ಎನ್ನುವಂಥ ಸ್ಥಿತಿಯನ್ನು ನಮ್ಮ ಡೊಳ್ಳು ಕಲಾವಿದರು ನಿರ್ಮಾಣ ಮಾಡಿರುತ್ತಾರೆ.

ನಂದಿಕೋಲು ಕುಣಿತ

ಬೆಂಗಳೂರು ಗ್ರಾಮಾಂತರ, ತುಮಕೂರು, ಮಂಡ್ಯ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಕಂಡುಬರುವ ನಂದಿಕೋಲು ಕುಣಿತವು ಶೈವ ಸಂಪ್ರದಾಯಕ್ಕೆ ಸೇರಿದ ಗಂಡುಕಲೆ. ಈ ಕುಣಿತದ ಹುಟ್ಟಿನ ಹಿಂದೆ ದಕ್ಷಯಜ್ಞಕ್ಕೆ ಸಂಬಂಧಿಸಿದ ಪುರಾಣವಿದೆ. ದಕ್ಷಯಜ್ಞವನ್ನು ಧ್ವಂಸ ಮಾಡಿದ ವೀರಭದ್ರನಿಗೆ, ದಕ್ಷನ ಪರಿವಾರವು ಶಿವಭಕ್ತ ಗಣಗಳೆಂದು ತಿಳಿದು ಬಂದು, ತಾನು ಸಂಹರಿಸಿದ ಅವರುಗಳಿಗೆಲ್ಲಾ ಮುಕ್ತಿಯನ್ನು ದೊರಕಿಸಿಕೊಡಬೇಕೆಂದು ಯೋಚಿಸಿ, ವ್ಯಾಸ ಮುನಿಯ ತೋಳನ್ನು ಕೋಲನ್ನಾಗಿ ಮಾಡಿ, ಅದಕ್ಕೆ ಶಿವನ ವಾಹನವಾದ ನಂದಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಋಷಿಗಳ ರುಂಡಗಳನ್ನು ಹಂಡೆಗಳನ್ನಾಗಿ ಮಾಡಿ ನಂದಿಕೋಲಿಗೆ ತೊಡಿಸಿ, ಮಹಾದ್ವಾರದಲ್ಲಿದ್ದ ಸಿಂಹದ ಚರ್ಮವನ್ನು ಸುಲಿದು ಧ್ವಜ ಮಾಡಿ ನಂದಿಕೋಲಿನ ತುದಿಗೆ ಕಟ್ಟಿ, ಆ ಧ್ವಜವನ್ನು ಮುಂದು ಮಾಡಿಕೊಂಡು ವಿಜಯಘೋಷದೊಂದಿಗೆ ಕೈಲಾಸಕ್ಕೆ ತೆರಳಿದನೆಂದು ಪ್ರತೀತಿ ಇದೆ.

ನಂದಿಕೋಲಿಗೆ ನಂದೀಧ್ವಜ, ಬಿರಡೆ ಕಂಬ, ವ್ಯಾಸಗೋಲು, ನಂದಿಕಂಬ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಸುಮಾರು ಹದಿನಾರರಿಂದ ಹದಿನೆಂಟು ಮೊಳ ಎತ್ತರವಿರುವ, ಒಂದು ಆಳು ಎರಡೂ ಕೈಗಳಿಂದ ತಬ್ಬಿ ಹಿಡಿಯಬಹುದಾದಷ್ಟು ದಪ್ಪ ಇರುವ ಬಿದಿರಿನ ಬೊಂಬು ಒಂದಕ್ಕೆ ಹಿತ್ತಾಳೆಯ ಬಿರಡೆಗಳನ್ನು ಉದ್ದಕ್ಕೂ ಜೋಡಿಸಿ ಪ್ರತೀ ಎರಡು ಬಿರಡೆಗಳ ಮಧ್ಯೆ ಬರುವಂತೆ ಹಿತ್ತಾಳೆಯ ಗಗ್ಗರಗಳು ಮತ್ತು ಕುಚ್ಚಿನ ತಟ್ಟೆಗಳನ್ನು ಸೇರಿಸಿರುತ್ತಾರೆ. ಬೊಂಬಿನ ತುತ್ತ ತುದಿಯಲ್ಲಿ ಹಿತ್ತಾಳೆ ಅಥವಾ ಬೆಳ್ಳಿಯ ಕಿರು ಛತ್ರಿಯನ್ನು ಅಳವಡಿಸಿದ್ದು ಈ ಛತ್ರಿಯ ಮೇಲು ಭಾಗದಲ್ಲಿ ಕಳಶ ಇರುತ್ತದೆ.

ಕಳಶದ ತುದಿಯನ್ನು ರೇಷ್ಮೆಗೊಂಡೆಗಳಿಂದ ಅಲಂಕರಿಸಿರುತ್ತಾರೆ. ಬಿದಿರಿನ ಬಂಬಿನ ಬುಡದಿಂದ ಸುಮಾರು ಏಳೆಂಟು ಅಡಿ ಎತ್ತರದಲ್ಲಿ



ಸಣ್ಣ ಹಲಗೆಯೊಂದನ್ನು ಅಳವಡಿಸಿದ್ದು, ಆ ಹಲಗೆಯ ಮೇಲೆ ಬೆಳ್ಳಿಯ ಕವಚ ತೊಡಿಸಿದ ಸಣ್ಣ ಆಕೃತಿಯ ನಂದಿ ವಿಗ್ರಹವನ್ನು ಪ್ರತಿಷ್ಠಾಪಿಸಿರುತ್ತಾರೆ. ಕಂಬದ ತುದಿಗೆ ಕಾವಿ ಬಣ್ಣದ ರೇಷ್ಮೆಯ ಬಟ್ಟೆ ಅಥವಾ ಧ್ವಜ ಕಟ್ಟಿರುತ್ತಾರೆ. ಹೀಗೆ ಬಿರಡೆ, ಗಗ್ಗರ, ತಟ್ಟೆ, ಕುಚ್ಚು, ಧ್ವಜ, ಬಸವಣ್ಣನಿಂದ ಅಲಂಕೃತಗೊಂಡ ಬಿದಿರಿನ ಬೊಂಬೇ ನಂದಿಕೋಲು.

ಅಲಂಕರಿಸಿದ ನಂದೀಧ್ವಜವನ್ನು ಹೊತ್ತು ಕುಣಿಯುವ ಕಲಾವಿದರು ಕಚ್ಚೆ ಪಂಚೆ, ಕಸೆ ಅಂಗಿ, ತಲೆಗೆ ಪೇಟ ಇಲ್ಲವೆ ರುಮಾಲು, ಹಣೆಗೆ ವಿಭೂತಿ ಧರಿಸಿರುತ್ತಾರೆ. ಸಾಕಷ್ಟು ಎತ್ತರದ ಹಾಗೂ ಭಾರವಾದ ನಂದಿಧ್ವಜವು ಆಯ ತಪ್ಪದಂತೆ ಹಿಡಿದುಕೊಳ್ಳಲು ಬೆನ್ನಿನ ಪಾರ್ಶ್ವಕ್ಕೆ

ಬರುವಂತೆ 'ನೇವಾರ' ಎಂಬ ಬಟ್ಟೆಚೀಲವನ್ನು ಹೆಗಲಿಗೆ ತೂಗು ಹಾಕಿಕೊಂಡಿದ್ದು, ಆ ಚೀಲದ ಒಳಗೆ ನಂದಿಧ್ವಜದ ಬುಡವನ್ನು ಇಟ್ಟು ಎರಡೂ ಕೈಗಳಿಂದ ಭದ್ರವಾಗಿ ಹಿಡಿದುಕೊಂಡು ಕುಣಿಯುತ್ತಾರೆ. ಕೆಲವೊಮ್ಮೆ ಎರಡು ಹಗ್ಗಗಳನ್ನು ಧ್ವಜದ ಮಧ್ಯ ಭಾಗದಲ್ಲಿ ಕಟ್ಟಿ ಆಚೀಚೆ ಒಬ್ಬೊಬ್ಬರು ಹಿಡಿದು ನಿಯಂತ್ರಿಸುವರು.

ಕುಣಿಯುವಾಗ ನಂದಿಕೋಲಿಗೆ ತೊಡಿಸಿದ ಹಿತ್ತಾಳೆಯ ಬಿರಡೆ, ಗಗ್ಗರ, ತಟ್ಟೆ ಮೊದಲಾದ ತೊಡಿಗೆಗಳು ಗಲ್‌ಗಲ್ ಎಂದು ಸದ್ದು ಮಾಡುತ್ತವೆ. ಕುಣಿಯುವ ಹುಮ್ಮಸ್ಸಿಗೆ ಹಿಮ್ಮೇಳವನ್ನು ಒದಗಿಸುವ ಈ ಸದ್ದಿನೊಂದಿಗೆ ತಮಟೆ, ನಗಾರಿ, ಕರಡೆ, ಸಮಾಳ, ನಾಗಸ್ವರ ವಾದ್ಯಗಳ ದನಿಯು ಸೇರಿದರಂತೂ ಹುಮ್ಮಸ್ಸು ದುಪ್ಪಟ್ಟಾಗುತ್ತದೆ. ಕಲಾವಿದರ ಕುಣಿತದ ಗತಿಯೂ ತೀವ್ರಗೊಳ್ಳುತ್ತದೆ. ಒಂದ್ಹೆಜ್ಜೆ, ಎರಡ್ಹೆಜ್ಜೆ, ಮೂರ್ಹೆಜ್ಜೆ, ತಿರುಣಿ ಹೆಜ್ಜೆಗಳನ್ನು ಹಾಕುತ್ತ ವಿವಿಧ ಭಾವ ಭಂಗಿಗಳಲ್ಲಿ ಕುಣಿಯುವರು. ಕುಣಿಯುವ ವ್ಯಕ್ತಿ ದೃಢಕಾಯನಾಗಿದ್ದರಂತೂ ನಂದಿಧ್ವಜವನ್ನು ಹೆಗಲು, ಹಣೆ, ಎದೆಗಳ ಮೇಲೆಲ್ಲಾ ಇಟ್ಟುಕೊಂಡು ಕುಣಿಯುವನು. ನಂದಿಧ್ವಜದ ಕುಣಿತಕ್ಕೆ ಬರಿಯ ಶಕ್ತಿಯಿದ್ದರಷ್ಟೇ ಸಾಲದು; ಕೋಲಿನ ಸಮತೋಲನವನ್ನು ಕಾಯ್ದುಕೊಂಡು ಕುಣಿಯುವ ಯುಕ್ತಿಯೂ ಬೇಕು.

ಪಂಜಿನ ಕುಣಿತ

ಮಂಡ್ಯ ಜಿಲ್ಲೆಯಲ್ಲಿ ವಿಶೇಷವಾಗಿ ಕಂಡುಬರುವ ಪಂಜಿನ ಕುಣಿತವು ದೇವರಿಗೆ ಸಲ್ಲಿಸುವ ದೀವಟಿಗೆ ಸೇವೆಯ ರೂಪ. ಗ್ರಾಮದೇವತೆಗಳ ಹಬ್ಬದ ಸಂದರ್ಭದಲ್ಲಿ ಮತ್ತು ಸುಗ್ಗಿಯ ಸಂಭ್ರಮದ

ದಿನಗಳಲ್ಲಿ ಹೆಚ್ಚಾಗಿ ಪ್ರದರ್ಶಿಸುತ್ತಿದ್ದ ಈ ಕಲೆಯು ಕ್ರಮೇಣ ಮನರಂಜನೆಯ ಪ್ರಕಾರವಾಗಿ ಬೆಳೆದು ಬಂದಿದೆ. ಕಬ್ಬಿಣದ ಸರಳಿನಲ್ಲಿ ತ್ರಿಶೂಲದ ಆಕಾರದಲ್ಲಿ ಪಂಜನ್ನು ಸಿದ್ಧಪಡಿಸಿ, ಅದರ ಮೂರು ದಳಗಳಿಗೂ ಬಟ್ಟೆ ಸುತ್ತುತ್ತಾರೆ. ಹರಳೆಣ್ಣೆ, ಹಿಪ್ಪೆಎಣ್ಣೆ, ಇಲ್ಲವೆ ಹೊಂಗೆ ಎಣ್ಣೆಯಲ್ಲಿ ಈ ಬಟ್ಟೆಯನ್ನು ಚನ್ನಾಗಿ ನೆನೆಸುತ್ತಾರೆ. ಎಣ್ಣೆಯಲ್ಲಿ ಚನ್ನಾಗಿ ನೆನೆದ ಬಟ್ಟೆಗೆ ಬೆಂಕಿ ಹತ್ತಿಸಿದಾಗ ಮೂರು ದಳಗಳೂ ಧಗಧಗನೆ ಉರಿಯಲಾರಂಭಿಸುತ್ತವೆ. ಉರಿಯುವ ಪಂಜುಗಳನ್ನು ಹಿಡಿದು ಕುಣಿಯುವುದರಿಂದ ಇದಕ್ಕೆ 'ಪಂಜಿನ ಕುಣಿತ' ಎಂಬ ಹೆಸರು ಬಂದಿರುತ್ತದೆ.



ಈ ಕುಣಿತದಲ್ಲಿ ಎಷ್ಟು ಜನ ಕಲಾವಿದರಾದರೂ ಭಾಗವಹಿಸಬಹುದು. ತುಂಬು ಅಥವಾ ಅರೆದೋಳಿನ ಬಿಳಿಯ ಅಂಗಿ, ಮೊಳಕಾಲಿನವರೆಗೆ ಏರುಗಟ್ಟಿದ ಬಿಳಿಯ ಕಾಸೆ ಪಂಚೆ, ಸೊಂಟಕ್ಕೊಂದು ವಸ್ತ್ರ, ತಲೆಗೆ ಮೈಸೂರು ಪೇಟ, ಹಣೆಗೆ ಗಂಧ

ಧರಿಸಿದ ಕಲಾವಿದರು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಬಲಗೈಯಲ್ಲಿ ತಲಾ ಒಂದೊಂದು ಪಂಜನ್ನು, ಎಡಗೈಯಲ್ಲಿ ಸಣ್ಣ ಕರವಸ್ತ್ರವನ್ನು ಹಿಡಿದು ಸಾಲಾಗಿ ನಿಲ್ಲುತ್ತಾರೆ. ಕುಣಿತದ ಪ್ರಾರಂಭಕ್ಕೆ ಒಬ್ಬಿಬ್ಬರು 'ತಿರುಪತಿ ವೆಂಕಟರಮಣ ಗೋವಿಂದಾ' ಎಂದು ಜೋರಾಗಿ ಸಾರಿದರೆ, ಉಳಿದವರೆಲ್ಲರೂ 'ಗೋವಿಂದಾ' ಎಂದು ಉದ್ಘೋಷಿಸುತ್ತಾರೆ. ಮೂರು ಮೂರು ಸಲ ಹೀಗೆ ಹೇಳಿ ಎಲ್ಲರೂ ತಾವು ಹಿಡಿದಿರುವ ಪಂಜನ್ನು ನೆಲಕ್ಕೆ ಬಾಗಿಸಿ ನಿಧಾನವಾಗಿ ಮೇಲೆ ಎತ್ತುತ್ತಾರೆ. ದೇವರಿಗೆ ನಡೆಯುವ ದೀವಟಿಗೆಯ ಸೇವೆಯಲ್ಲಿ ಇದನ್ನು 'ದೀವಟಿಗೆ ಸಲಾಮು' ಎಂದು ಕರೆದರೆ ಪಂಜಿನ ಕುಣಿತದಲ್ಲಿ 'ಮೊದಲ ಸೇವೆ' ಎಂದು ಕರೆಯುತ್ತಾರೆ. ಈ ಆಚರಣೆಯು ಆದಿಮ ಸಂದರ್ಭದಲ್ಲಿ ಬೆಂಕಿಯ ಮಹತ್ವವನ್ನು ಸಾರುವ ಆಶಯವನ್ನು ಪ್ರಕಟಪಡಿಸುತ್ತದೆ.

'ಮೊದಲ ಸೇವೆ' ಮುಗಿಯುತ್ತಿದ್ದಂತೆಯೇ ಕಲಾವಿದರೆಲ್ಲರೂ ಒಟ್ಟಾಗಿ ಕೇಕೆ ಹಾಕುತ್ತಾ ಓಡೋಡಿ ಮುಂದಕ್ಕೆ ಬಂದು ವಿಶಾಲವಾದ ಮೈದಾನದಲ್ಲಿ ಉದ್ದಸಾಲು, ಅಡ್ಡಸಾಲು ಮತ್ತು ಸುತ್ತುಸಾಲಿನಲ್ಲಿ ಹೆಜ್ಜೆ ಹಾಕುತ್ತಾ ಉರಿಯುವ ಪಂಜನ್ನು ಮೇಲೆ ಕೆಳಗೆ, ಅಕ್ಕಪಕ್ಕ ನಾನಾ ನಮೂನೆಗಳಲ್ಲಿ ಸುತ್ತಿಸುತ್ತಾ ಕುಣಿಯಲಾರಂಭಿಸುತ್ತಾರೆ. ತಮಟೆ-ನಗಾರಿಗಳ ಸದ್ದು ಕುಣಿತಕ್ಕೆ ಉತ್ತಮ ಪ್ರೇರಣೆಯನ್ನು ಒದಗಿಸುತ್ತದೆ. ಹೆಚ್ಚಾಗಿ ಈ ಪ್ರದರ್ಶನವು ರಾತ್ರಿಯ ಹೊತ್ತು ನಡೆಯುತ್ತದೆ. ಸುತ್ತಲೂ ಕಗ್ಗತ್ತಲು. ನಡುವೆ ಉರಿಯುವ ಪಂಜುಗಳು, ಮಸುಕು ಮಸುಕಾಗಿ ಕಾಣುವ ಕಲಾವಿದರು. ಪಂಜುಗಳ ಓಲಾಟ, ಬಳುಕಾಟಗಳು, ಕಲಾವಿದರು ಕತ್ತಲಲ್ಲಿ ಪಂಜುಗಳನ್ನು ಹಿಡಿದು ವಿವಿಧ ಭಾವಭಂಗಿಗಳಲ್ಲಿ ಸುತ್ತುತ್ತಾ, ಕುಳಿತು, ನಿಂತು ಕುಣಿಯುತ್ತಿರುವಾಗ ಹೊಳೆಯುವ ಪಂಜಿನ ಬೆಳಕಿನಲ್ಲಿ ಕಾಣುವ ಅವರ ಮುಖಗಳನ್ನು ನೋಡಲು ರಂಜನೀಯವಾಗಿರುತ್ತದೆ. ಇವುಗಳ ನಡುವೆ ಕೇಳಿಬರುವ ಕಲಾವಿದರ ಕೇಕೆಯಂತೂ ಸೊಗಸೇ ಸೊಗಸು.

ತಮಟೆ ಕುಣಿತ

ಒಲೆ ಇಲ್ಲದ ಮನೆಯಿಲ್ಲ; ತಮಟೆ ಇಲ್ಲದ ಊರಿಲ್ಲ. ತಮಟೆಯು ಗ್ರಾಮೀಣ ಬದುಕಿನ ಸಾಂಸ್ಕೃತಿಕ ಲೋಕದ ವೈಶಿಷ್ಟಪೂರ್ಣ ವಾದ್ಯ. ಹುಟ್ಟಿನಿಂದ ಮೊದಲುಗೊಂಡು ಸಾವಿನವರೆಗೂ ಜರುಗುವ ಜೀವನಾವರ್ತ, ವಾರ್ಷಿಕಾವರ್ತ, ಆಚರಣೆಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಜಾತ್ರೆ, ಉತ್ಸವ, ಕುಣಿತ, ಹಬ್ಬ ಹರಿದಿನ, ಆಟ-ಬಯಲಾಟ, ಮದುವೆ, ಮರಣ, ಮೆರವಣಿಗೆ ಯಾವುದಕ್ಕೇ ಆಗಲಿ ತಮಟೆ ಇರಲೇಬೇಕು.



ತಮಟೆಯನ್ನು ತಯಾರಿಸುವುದು ತುಂಬಾ ಸರಳವಾದ ವಿಧಾನ. ವೃತ್ತಾಕಾರವಾದ ಮರದ ಬಳೆಯೊಂದಕ್ಕೆ ಚೆನ್ನಾಗಿ ಹದಗೊಳಿಸಿದ ಆಡಿನ ಚರ್ಮ ಅಥವಾ ದನದ ಚರ್ಮವನ್ನು, ಚರ್ಮದ ಬಾರುಗಳಿಂದ ಬಿಗಿದು ಕಟ್ಟುತ್ತಾರೆ. ಹೆಗಲಿಗೆ ನೇತು ಹಾಕಿಕೊಳ್ಳಲು ಹೆಗಲು ಪಟ್ಟಿಯನ್ನು

ತಮಟೆಗೆ ಜೋಡಿಸುತ್ತಾರೆ. ಪ್ರಾದೇಶಿಕವಾಗಿ ತಮಟೆಯ ಆಕಾರವು ವ್ಯತ್ಯಾಸವಾಗಿರುತ್ತದೆ. ಒಂದೂವರೆ ಅಡಿಯ ಸಣ್ಣ ತಮಟೆಯಿಂದ ಹಿಡಿದು ಎಂಟು ಅಡಿ ವ್ಯಾಸದ ದೊಡ್ಡ ತಮಟೆಗಳೂ ಇವೆ.

ತಮಟೆಗೆ ಉತ್ತರ ಕರ್ನಾಟಕದಲ್ಲಿ ಹಲಗೆ ಎಂದು ಕರೆಯುತ್ತಾರೆ. ಕೊಡಗು ಮತ್ತು ಕರಾವಳಿ ಭಾಗವನ್ನುಳಿದು ಕರ್ನಾಟಕದಾದ್ಯಂತ ತಮಟೆ ವಾದ್ಯವು ಕಾಣಸಿಗುತ್ತದೆ. ತಮಟೆಯನ್ನು ನುಡಿಸುವುದಕ್ಕೆ ಮೊದಲು ಬೆಂಕಿಯ ಉರಿಯಲ್ಲಿ ಹದವಾಗಿ ಕಾಯಿಸುತ್ತಾರೆ. ಹೆಗಲಿನ ಪಟ್ಟಿಯನ್ನು ಭುಜಕ್ಕೆ ನೇತು ಹಾಕಿಕೊಂಡು ಎದೆಯ ಎಡಭಾಗಕ್ಕೆ ಎತ್ತರಿಸಿ ಎಡಗೈಯಲ್ಲಿ ತಮಟೆಯ ಮೇಲುಭಾಗವನ್ನು ಅಪ್ಪಿ ಹಿಡಿದು ಬಲಗೈನಿಂದ ಬಾರಿಸಿದಾಗ ಹಿತವಾದ ಕಣಿ ಕಣಿ ನಾದ ಹೊರ ಹೊಮ್ಮುತ್ತದೆ. ತಮಟೆ ಬಾರಿಸಲು ಒಂದು ತೆಳುವಾದ ಚಕ್ಕೆ ಕಡ್ಡಿ ಮತ್ತು ದುಂಡಾದ ಕಡ್ಡಿಯೊಂದನ್ನು ಬಳಸುತ್ತಾರೆ. ಬಲಗೈಯಲ್ಲಿ ಹಿಡಿದ ಉದ್ದದ ದುಂಡು ಕಡ್ಡಿಯು ಹಲಗೆಯ ಮೇಲೆ ಮಿಂಚಿನಂತೆ ಸಂಚರಿಸುತ್ತಿದ್ದರೆ, ಎಡಗೈಯಲ್ಲಿ ಹಿಡಿದ ಚಕ್ಕೆ ಕಡ್ಡಿಯು ತಮಟೆಯ ಕಂಠ ಭಾಗದಲ್ಲಿ ಪಳಗುಟ್ಟುತ್ತಿರುತ್ತದೆ. ತಮಟೆಯ ಆಕಾರವು ಬದಲಾದಂತೆ ತಮಟೆ ಮೇಳದ ಸ್ವರೂಪವೂ ಬದಲಾಗುತ್ತದೆ. ಗುಲಬರ್ಗ,ಬಳ್ಳಾರಿ, ಧಾರವಾಡ ಜಿಲ್ಲೆಗಳಲ್ಲಿ ನಾಲ್ಕಾರು ಹಲಗೆಗಳನ್ನು ಸೇರಿಸಿ ಗತ್ತು ಬಾರಿಸುತ್ತಾರೆ. ಕೋಲಾರ, ಮಂಡ್ಯ, ಮೈಸೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ತಮಟೆಗಳೊಂದಿಗೆ ನಗಾರಿ, ಹರೆ, ತಾಸೆ, ಕುಣಿಮಿಣಿ, ದೋಣುಗಳು ಸೇರಿಕೊಳ್ಳುತ್ತವೆ.

ಉತ್ತರ ಕರ್ನಾಟಕದಲ್ಲಿ ತಮಟೆ ಮೇಳಕ್ಕೆ ಹಲಗೆ ಮಜಲು, ಹಲಗೆ ಬಾಜಿ, ಹಲಗೆ ಮದಾಲಸಿ ಎಂದ ಕರೆಯುತ್ತಾರೆ. ಈ ಮೇಳದಲ್ಲಿ ಹಲಗೆಗಳೊಂದಿಗೆ ಸನಾದಿ, ತಾರ್ಸೆ, ದಿಮ್ಮು, ಟಕೂರಿ, ಜಾಗಟೆ

ಮುಂತಾದ ವಾದ್ಯಗಳು ಜತೆಗೂಡುತ್ತವೆ. ಹಲಗೆ ಬಡಿತದಲ್ಲಿ ದೀನಬಾಜು, ಹನುಮಂತನ ಗತ್ತು, ಕುದುರೆ ಗತ್ತು, ಗವಾರ್ ಹೆಜ್ಜೆ, ನವಬತ್ತು, ದೇವರಗತ್ತು, ಬುಕಾಲ, ಚಿತ್ರಾಟ ಮುಂತಾದ ಗತ್ತುಗಳಿವೆ.

ಯಾವುದೇ ಕುಣಿತಕ್ಕೆ ತಮಟೆ ಕಡ್ಡಾಯ. ತಮಟೆಯ ಸದ್ದು ತೀವ್ರವಾದಷ್ಟೂ ಕುಣಿತದ ಗತಿಯೂ ಸಹ ತಾರಕಕ್ಕೇರುತ್ತದೆ. ತಮಟೆ ಬಾರಿಸುವವನು ಕುಶಲನಾಗಿದ್ದರಂತು ಕುಣಿತದವರನ್ನು ಉಸಿರು ಹುಯ್ಯುವಷ್ಟು ಕುಣಿಸಬಹುದು. ಹಲಗೆಯನ್ನು ಹಿಂದೆ ಮುಂದೆ ತೂಗಾಡಿಸುತ್ತಾ, ಅಕ್ಕ ಪಕ್ಕಕ್ಕೆ ತಿರುಗಿಸಿ, ಅಂಗಾತ ಮಲಗಿ ಬಾರಿಸುವುದು, ಎರಡು ಕಾಲುಗಳ ಮಧ್ಯೆ ಇಟ್ಟುಕೊಂಡು ವಿವಿಧ ನಾದಗಳು ಹೊರ ಹೊಮ್ಮುವಂತೆ ಬಾರಿಸುತ್ತಾರೆ. ತಮಟೆ ಬಾರಿಸುತ್ತಾ ನೆಲದ ಮೇಲಿರಿಸಿದ ನೋಟು, ಸೂಜಿ ಇತ್ಯಾದಿಗಳನ್ನು ಕಣ್ಣುರೆಪ್ಪೆಯಿಂದ ಮೇಲೆತ್ತುವ ಚಮತ್ಕಾರವನ್ನು ಪ್ರದರ್ಶಿಸುತ್ತಾರೆ.

ತಮಟೆ ಮೇಳದಲ್ಲಿ ಒಬ್ಬರನ್ನೊಬ್ಬರು ಮೀರಿಸುವಂತೆ ಜುಗಲ್‌ಬಂದಿ ನಡೆಸುತ್ತಾರೆ. ತಬಲವಾದನ, ಘಟವಾದನ, ಡೊಳ್ಳುವಾದನಗಳ ಗತ್ತುಗಳನ್ನು ಹೊರಹೊಮ್ಮಿಸುತ್ತಾರೆ. ತಮಟೆಯ ಮೇಲೆ ತ್ವರಿಗತಿಯಲ್ಲಿ ಗುಣಿಗಳನ್ನಾಡಿಸುವ ಕಲಾವಿದರ ಚುರುಕುತನವು ಬೆರಗಾಗಿಸುತ್ತದೆ. ತಮಟೆಗಳನ್ನು ಬಾರಿಸುತ್ತಲೇ ಮಂಡಲಾಕಾರವಾಗಿ ಕುಣಿಯುವುದು, ಒಂದ್ಹೆಜ್ಜೆ, ಎರಡ್ಹೆಜ್ಜೆ, ಸುತ್ತುಗುಣಿತಗಳನ್ನು ಕುಣಿಯುತ್ತಾರೆ. ಕುಕ್ಕುರುಗಾಲಲ್ಲಿ ಕುಳಿತು ಕುಪ್ಪಳಿಸುವುದು, ಚಂಗನೆ ಜಿಗಿಯುವುದು ಇತ್ಯಾದಿ ಕಸರತ್ತುಗಳನ್ನು ಮಾಡುತ್ತಾರೆ.

ಬೆಂಗಳೂರು ನಗರ, ಗ್ರಾಮಾಂತರ ಮತ್ತು ಕೋಲಾರ ಜಿಲ್ಲೆಗಳಲ್ಲಿರುವ ಕಲಾವಿದರು ತಮಟೆವಾದನ ಮತ್ತು ಕುಣಿತಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ತಂದುಕೊಟ್ಟಿದ್ದಾರೆ.

ಪಟಾ ಕುಣಿತ

ನಂದಿಧ್ವಜ ಶೈವ ಸಂಪ್ರದಾಯದ್ದಾದರೆ, ಪಟಾ ಕುಣಿತವು ವೈಷ್ಣವ ಸಂಪ್ರದಾಯಕ್ಕೆ ಸೇರಿದ ಕಲೆ. ಮಂಡ್ಯ, ಮೈಸೂರು, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಂಡು ಬರುವ ಪಟಾ ಕುಣಿತವು ರಂಗದ ಕುಣಿತವನ್ನು ಹೋಲುತ್ತದೆ. ಬಣ್ಣ ಬಣ್ಣದ



ಬಟ್ಟೆಗಳಲ್ಲಿ ಸುತ್ತಿದ ಸುಮಾರು ಹದಿನೈದು– ಇಪ್ಪತ್ತು ಅಡಿ ಉದ್ದದ ಬಿದಿರಿನ ಜವಳಿಗಳೇ ಪಟಗಳು. ರೇಷ್ಮೆಯ ಜಾಲರಿಗಳನ್ನು ಸುತ್ತಿದ ಜವಳಿಯ ತುದಿಗೆ ಬಣ್ಣದ ಕುಚ್ಚು ಕಟ್ಟಿರುತ್ತಾರೆ. ಪಟಾ ಕುಣಿತದ ಕಲಾವಿದರು ಬಿಳಿಯ ಕಾಸೆ ಪಂಚೆ. ನಿಲುವಂಗಿ, ರುಮಾಲು, ಸೊಂಟಕ್ಕೆ ಅಡ್ಡಲಾಗಿ ಬಿಗಿದ ಬಣ್ಣದ ವಸ್ತ್ರ, ಹಣೆಯಲ್ಲಿ ನಾಮ, ಕೊರಳಿಗೆ ಮಣಿಹಾರ ಧರಿಸಿ ಎಡಗೈಯಲ್ಲಿ ಬಿಳಿಯ ಸಣ್ಣ ಚೌಕವೊಂದನ್ನು ಹಿಡಿದು ಪಟಗಳನ್ನು ಕುಣಿಸುತ್ತಾರೆ. ನಂದಿಕೋಲಿನ ಆಧಾರ

ಚೀಲದಂತೆ, ಗಟ್ಟಿ ಬಟ್ಟೆಯ ಚೀಲ ಒಂದನ್ನು ಹೆಗಲಿಗೆ ನೇತುಹಾಕಿಕೊಂಡು ಆ ಚೀಲದ ಒಳಗೆ ಪಟಗಳ ತಳಭಾಗವನ್ನಿರಿಸಿಕೊಳ್ಳುತ್ತಾರೆ.

ಪಟವನ್ನು ಬಲಗೈಲಿ ಹಿಡಿದುಕೊಂಡ ಕಲಾವಿದರು ತಮಟೆ-ನಗಾರಿಗಳ ಗತ್ತಿಗೆ ಅನುಗುಣವಾಗಿ ವಿವಿಧ ಭಾವಭಂಗಿಗಳಲ್ಲಿ ಕುಣಿಯುತ್ತಾರೆ. ಈ ಕುಣಿತಕ್ಕೆ ಇಷ್ಟೇ ಜನರಿರಬೇಕೆಂಬ ನಿಯಮವೇನಿಲ್ಲ. ಕುಣಿಯುವವರು ಪರಸ್ಪರ ಅಭಿಮುಖವಾಗಿ ನಿಂತು ಕುಣಿಯುವಾಗ ಪಟದ ಜವಳಿಗಳು ಅತ್ತಿತ್ತ ಬಾಗುವುದು, ಬಳುಕುವುದು, ವೃತ್ತಾಕಾರವಾಗಿ ಚಲಿಸುತ್ತ ಪಟಗಳನ್ನು ಹಿಂದಕ್ಕೆ ಮುಂದಕ್ಕೆ ಬಾಗಿಸಿ ಕುಣಿಯುವಾಗ ಅವುಗಳಿಗೆ ಸುತ್ತಿದ್ದ ರೇಷ್ಮೆ ಬಟ್ಟೆಯ ಜಾಲರಿಗಳ ಚಲ್ಲಾಟದ ದೃಶ್ಯವಂತೂ ಮನಮೋಹಕ. ಗ್ರಾಮದೇವತೆಗಳ ಹಬ್ಬಗಳಲ್ಲಿ, ಜಾತ್ರೆಗಳಲ್ಲಿ, ಭಾಗವಂತಿಕೆ ಮೇಳಗಳಲ್ಲಿ ಪಟಾ ಕುಣಿತದ ಪ್ರದರ್ಶನ ನಡೆಯುತ್ತದೆ.

ಪಟಾ ಕುಣಿಯುವವರು ಬಲಗೈಯಲ್ಲಿ ನೆವಾರದಲ್ಲಿ ಇಟ್ಟ ಪಟವನ್ನು ಹಿಡಿದುಕೊಂಡು ಎಡಗೈಯಲ್ಲಿ ಹಿಡಿದ ವಸ್ತ್ರಗಳನ್ನು ಅತ್ತಿತ್ತ ಬೀಸುತ್ತಾ ಹಿಮ್ಮೇಳದ ವಾದ್ಯಗಳ ಅಬ್ಬರದ ಸದ್ದಿಗೆ ಲಯಬದ್ಧವಾಗಿ ಕುಣಿಯುತ್ತಾರೆ. ಪಟಾ ಕುಣಿತದಲ್ಲಿ ಹೆಜ್ಜೆ ಕುಣಿತ, ಗೆಜ್ಜೆ ಕುಣಿತ, ಗೋಪುರ ಕುಣಿತ, ಹೂವಿನ ಕುಣಿತಗಳನ್ನು ಪ್ರದರ್ಶಿಸುತ್ತಾರೆ. ಹೆಜ್ಜೆ ಕುಣಿತದಲ್ಲಿ ಒಂದ್ಹೆಜ್ಜೆ, ಎರಡ್ಹೆಜ್ಜೆ, ಮೂರ್ಹೆಜ್ಜೆ, ಸುತ್ತು ಹೆಜ್ಜೆ, ಸಾಲು ಹೆಜ್ಜೆ ಮೊದಲಾದ ಪ್ರಕಾರಗಳಲ್ಲಿ ಕುಣಿಯುತ್ತಾರೆ. ಗೋಪುರ ಕುಣಿತದಲ್ಲಿ ಪಟಾ ಹಿಡಿದ ಕಲಾವಿದರು ತಮ್ಮ ಎಲ್ಲಾ ಪಟಾಗಳನ್ನು ಮಂಡಲಾಕಾರದಲ್ಲಿ ಕುಣಿಯುತ್ತಾ ಮಧ್ಯ ಬಿಂದುವಿನೊಳಕ್ಕೆ ಸಂಯೋಜಿಸಿ ಹಿಂದೆ ಮುಂದೆ ಹೆಜ್ಜೆಗಳನ್ನು ಊರುತ್ತಾ ಕುಣಿಯುವುದನ್ನು ನೋಡಿದವರಿಗೆ ಇಡೀ ಗೋಪುರವೇ

ರಂಗಸ್ಥಳದಲ್ಲಿ ಓಡಾಡುತ್ತಿರುವಂತೆ ಭಾಸವಾಗುತ್ತದೆ. ಹೂವಿನ ಕುಣಿತದಲ್ಲಿ ಕಲಾವಿದರು ಪರಸ್ಪರ ಅಭಿಮುಖವಾಗಿ ನಿಂತು ಪಟಗಳನ್ನು ಕತ್ತರಿಯಾಕಾರದಲ್ಲಿ ಕೂಡಿಸಿದಾಗ ರೇಷ್ಮೆ ಕುಚ್ಚು ಮತ್ತು ಗೊಂಡೆಗಳಿಂದ ಅಲಂಕರಿಸಿದ ಪಟಗಳು ಗಿಡದಲ್ಲಿ ಆಗ ತಾನೇ ಅರಳಿನಿಂತ ಹೂವಿನ ಗೊಂಚಲುಗಳನ್ನು ನೆನಪಿಗೆ ತರುತ್ತವೆ.

ಪಟಾ ಕುಣಿತದಲ್ಲಿನ ಸಂಭ್ರಮ, ಉತ್ಸಾಹ, ಲವಲವಿಕೆ, ಕುಣಿತದ ಗತ್ತು, ವಿನ್ಯಾಸಗಳನ್ನು ಗಮನಿಸಿದಾಗ ಇದು ವಿಜಯೋತ್ಸವ ಸಂದರ್ಭದಲ್ಲಿ ಹುಟ್ಟಿಕೊಂಡ ಕಲೆ ಎಂಬುದು ವಿದಿತವಾಗುತ್ತದೆ.